# ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ

**(1869-1948)**

**ಕೃಷ್ಣ ಕುಮಾರ್**

***

ಬ್ರಿಟಿಷ್ ಆಡಳಿತವು ಭಾರತದಲ್ಲಿ ಹತ್ತೊಂಬತ್ತನೆ ಶತಮಾನದ ಪ್ರಾರಂಭದಲ್ಲಿ ಸ್ಥಾಪಿಸಿದ್ದ ವಸಾಹತುಶಾಹಿ ಶಿಕ್ಷಣ ವ್ಯವಸ್ಥೆಯ ನಿರಾಕರಣೆಯು ಸ್ವಾತಂತ್ರ್ಯ ಹೋರಾಟವು ಹುಟ್ಟು ಹಾಕಿದ ಬೌದ್ಧಿಕ ಕಸರತ್ತಿನ ಒಂದು ಪ್ರಮುಖ ಅಂಶವಾಗಿದೆ. ಬಹಳಷ್ಟು ಖ್ಯಾತ ಭಾರತೀಯರು, ರಾಜಕೀಯ ನಾಯಕರುಗಳು, ಸಮಾಜ ಸುಧಾರಕರು ಮತ್ತು ಬರಹಗಾರರು ಈ ನಿರಾಕರಣೆಗೆ ಧ್ವನಿಗೂಡಿಸಿದರು. ಆದರೆ ವಸಾಹತುಶಾಹಿ ಶಿಕ್ಷಣವನ್ನು ಗಾಂಧೀಜಿಯವರ ಹಾಗೆ ಹರಿತವಾಗಿ ಮತ್ತು ಸಂಪೂರ್ಣವಾಗಿ ಬೇರಾರೂ ತಿರಸ್ಕರಿಸಲಿಲ್ಲ, ಹಾಗೆಯೆ ಬೇರಾರೂ ಕೂಡ ಅವರು ಕೊಟ್ಟಂತಹ ಸಂಪೂರ್ಣ ಭಿನ್ನವಾದ ಪರ್ಯಾಯ ಆಯ್ಕೆಯನ್ನು ಮುಂದಿಡಲಿಲ್ಲ. ಗಾಂಧಿಯವರ ವಸಾಹತುಶಾಹಿ ಶಿಕ್ಷಣವು ಪಾಶ್ಚಾತ್ಯ ನಾಗರಿಕತೆಯ ಬಗೆಗಿನ ಅವರ ಒಟ್ಟಾರೆ ಟೀಕೆಯ ಒಂದು ಭಾಗವಾಗಿತ್ತು. ಅವರ ಪ್ರಕಾರ ವಸಾಹತುಶಾಹಿತ್ವವು, ಅದರ ಶಿಕ್ಷಣದ ಕಾರ್ಯಸೂಚಿಯನ್ನೂ ಒಳಗೊಂಡಂತೆ, ಅವರ ಹೃದಯಕ್ಕೆ ಅತ್ಯಂತ ಹತ್ತಿರವಾಗಿದ್ದ ಮೌಲ್ಯಗಳಾದ ಸತ್ಯ ಮತ್ತು ಅಹಿಂಸೆಯ ಸಂಪೂರ್ಣ ನಿರಾಕರಣೆಯಾಗಿತ್ತು. ಇತರ ಜನಾಂಗಗಳನ್ನು ಕೊಳ್ಳೆ ಹೊಡೆಯಲು ಮತ್ತು ನಾಶಪಡಿಸಲು ಪಾಶ್ಚಾತ್ಯರು ತಮ್ಮೆಲ್ಲ ಶಕ್ತಿ, ಶ್ರಮ ಮತ್ತು ಉದ್ದಿಮೆಗಳನ್ನು ಬಳಸಿಕೊಂಡರು ಎನ್ನುವುದು 'ಪಾಶ್ಚಾತ್ಯ ನಾಗರಿಕತೆ'ಯು ಅತ್ಯಂತ **ಕೆಟ್ಟ ಸ್ಥಿತಿಯಲ್ಲಿದೆ**[1] ಎನ್ನುವುದಕ್ಕೆ ಗಾಂಧಿಯವರಿಗೆ ಸಿಕ್ಕ ಪುರಾವೆಯಾಗಿತ್ತು'. ಹಾಗಾಗಿ ಅದು ಪ್ರಗತಿಯ ಸಂಕೇತವಾಗುವುದು ಸಾಧ್ಯವಿಲ್ಲ, ಅಥವಾ ಭಾರತದಲ್ಲಿ ಅದನ್ನು ಅನುಸರಿಸಲು ಮತ್ತು ಬೇರೂರುವಂತೆ ಮಾಡಲು ಅರ್ಹವಾದುದಲ್ಲ' ಎಂದು ಅವರು ಚಿಂತಿಸಿದರು.

ವಸಾಹತುಶಾಹಿ ಶಿಕ್ಷಣಕ್ಕೆ ಗಾಂಧಿಯವರ ಪ್ರತಿಕ್ರಿಯೆಯನ್ನು ಒಂದು ಬಗೆಯ ಅನ್ಯವರ್ಣದ್ವೇಷ ಎಂದು ವ್ಯಾಖ್ಯಾನಿಸುವುದು ತಪ್ಪಾಗುತ್ತದೆ. ಅದೇ ರೀತಿಯಲ್ಲಿ ಅದನ್ನು ಒಂದು ಸೂಕ್ಷ್ಮವಾದ ಹಳೆಯದನ್ನು ಮರುಸ್ಥಾಪಿಸುವ ಪ್ರಯತ್ನದ ಒಂದು ಸೂಚನೆ ಎಂದು ನೋಡುವುದೂ ಕೂಡ ತಪ್ಪಾಗುತ್ತದೆ. ವಿಶ್ವ ಶಿಕ್ಷಣದ ಇತಿಹಾಸದಲ್ಲಿ ಗಾಂಧಿಯವರ 'ಮೂಲಭೂತ ಶಿಕ್ಷಣ' ಯೋಜನೆಯನ್ನು ಒಂದು ಅನಾಮಧೇಯ ಪಥ್ಯ ಎಂದು ನೋಡಲು ಸಾಧ್ಯವಾದರೆ ಅದನ್ನು ನಾವು ಅನಾಯಾಸವಾಗಿ ಪೆಸ್ಟಾಲೊಜಿ, ಓವೆನ್, ಟಾಲ್‌ಸ್ಟಾಯ್ ಮತ್ತು ಡೀವೆಯವರ ಪಾಶ್ಚಾತ್ಯ ತೀವ್ರಗಾಮಿ ಮಾನವತವಾದಿಗಳ ಸಂಪ್ರದಾಯಕ್ಕೆ ಸೇರಿದುದು ಎಂದು ವರ್ಗೀಕರಿಸಬೇಕಾಗುತ್ತದೆ. ಗಾಂಧಿಯವರ ಇತರ ಕೆಲವು ಬರಹಗಳಲ್ಲಿ ಕಂಡುಬರುವಂತೆ ಇದನ್ನು ಪೂರ್ವ-ಪಶ್ಚಿಮ ಎನ್ನುವ ಪರಸ್ಪರ ವಿರುದ್ಧವಾದ ಸಂದರ್ಭದಲ್ಲಿ ಇಡಲೂ ಬರುವುದಿಲ್ಲ. ಹಾಗಿದ್ದೂ ಕೂಡ ಗಾಂಧಿಯು, ಭಾರತವು ಪಾಶ್ಚಾತ್ಯ ಪ್ರಗತಿಯ ಪರಿಕಲ್ಪನೆಯಿಂದ ದೂರ ಹೋಗಲು, ತನ್ನ ನೆಲಕ್ಕೆ ಸರಿಹೊಂದುವ ಮತ್ತು ಪಾಶ್ಚಾತ್ಯ ಮಾದರಿಯ ಅಭಿವೃದ್ಧಿಗಿಂತ

ಹೆಚ್ಚಾಗಿ ಇಡಿ ವಿಶ್ವಕ್ಕೆ ಕಾರ್ಯಸಾಧ್ಯವಾಗುವ ವಿಭಿನ್ನ ಅಭಿವೃದ್ಧಿ ಪಥದಲ್ಲಿ ಸಾಗಲು ಅನುವು ಮಾಡಿಕೊಡುವ ಅವರಿಗೆ ಸರಿ ಎಂದು ಕಂಡುಬಂದ ಹಾದಿಯಲ್ಲಿ ಪುನರ್‌ನಿರ್ಮಿಸಲಾದ ಶಿಕ್ಷಣವನ್ನು ಬಯಸಿದ್ದರು.

**ಮಾನವರ ವಿರುದ್ಧ ಯಂತ್ರ**

ಗಾಂಧಿ ಶೈಕ್ಷಣಿಕ ಸಂಕಥನವನ್ನು ಚಿರಪರಿಚಿತವಾಗಿರುವ ಪೂರ್ವ-ಪಶ್ಚಿಮದ ವಿಭಜನೆಯ ಆಚೆ ಇಟ್ಟು ಶಿಕ್ಷಣದ ಸಮಸ್ಯೆಯನ್ನು ಬೇರೆಡೆ ಅಂದರೆ ಮಾನವರ ವಿರುದ್ಧ ಯಂತ್ರವೆಂಬ ವಿಭಿನ್ನ ತತ್ವಜಿಜ್ಞಾಸೆಯ ನೆಲೆಯಲ್ಲಿ ಗುರುತಿಸುತ್ತಲೇ ಅದನ್ನು ಪಶ್ಚಿಮದ ವಿಮರ್ಶೆಯ ಒಂದು ಭಾಗವಾಗಿಸುತ್ತಿದ್ದರು. ಈ ತತ್ವಜಿಜ್ಞಾಸೆಯಲ್ಲಿ ಮಾನವ ಎನ್ನುವುದು ಕೇವಲ ಭಾರತಕ್ಕೆ ಸಂಬಂಧಿಸಿರಲಿಲ್ಲ, ಇಡೀ ವಿಶ್ವಕ್ಕೆ ಸಂಬಂಧಿಸಿದ್ದಾಗಿತ್ತು ಮತ್ತು ಯಂತ್ರ ಎನ್ನುವುದು ಕೈಗಾರಿಕೀಕರಣಗೊಂಡ ಪಶ್ಚಿಮವನ್ನು ಪ್ರತಿನಿಧಿಸುತ್ತಿತ್ತು. ಅವರ ಜೀವಮಾನವಿಡೀ ಗಾಂಧಿಯವರು ತಮ್ಮ ವೈಯಕ್ತಿಕ ಬದುಕು ಹಾಗೂ ಯಾವ ಕಾರಣಗಳಿಗಾಗಿ ಅವರು ಹೋರಾಡುತ್ತಿದ್ದರೊ ಅದನ್ನು ಜಾಗತಿಕ ಸಂದರ್ಭದಲ್ಲಿ ಗ್ರಹಿಸುತ್ತಿದ್ದರು. ಈ ಗ್ರಹಿಕೆಯು ಅವರ ಬದುಕಿನ ಅಂತಿಮ ದಶಕಗಳಲ್ಲಿಯೂ ಕೂಡ ಕೆಲಸ ಮಾಡುತ್ತಿತ್ತು. ಅಂತಹ ಕಾಲದ ಪ್ರಾರಂಭದಲ್ಲಿಯೆ ಅವರು 'ಮೂಲಭೂತ ಶಿಕ್ಷಣ'ದ ಪ್ರಸ್ತಾವನೆಯನ್ನು[2] ಮುಂದಿಟ್ಟರು.

ಶಾಲಾ ಪಠ್ಯಕ್ರಮದಲ್ಲಿ ಕರಕೌಶಲವನ್ನು ಪರಿಚಯಿಸುವುದು ಗಾಂಧಿಯವರ ಪ್ರಸ್ತಾವನೆಯ ಕೇಂದ್ರ ಅಂಶವಾಗಿತ್ತು. ಕರಕುಶಲತೆಯನ್ನು ಕೇವಲ ಒಂದು ಕಡ್ಡಾಯ ವಿಷಯವಾಗಿ ಶಾಲೆಯಲ್ಲಿ ಪರಿಚಯಿಸುವುದಷ್ಟೇ ಅವರ ಚಿಂತನೆಯಾಗಿರದೆ ಕರಕೌಶಲವನ್ನು ಇಡಿ ಶಾಲಾ ಕಲಿಕೆಯ ಕಾರ್ಯಕ್ರಮದ ಕೇಂದ್ರ ಬಿಂದುವಾಗಿಸುವುದಾಗಿತ್ತು. ಜಾತಿ ಶ್ರೇಣಿಯಲ್ಲಿ ಅತ್ಯಂತ ಕೆಳ ಹಂತದ ಗುಂಪುಗಳ ಜೊತೆ ಗುರುತಿಸಿಕೊಂಡಿರುವ ಉತ್ಪಾದನಾ ಕರಕುಶಲತೆಗಳನ್ನು ಭಾರತದಲ್ಲಿನ ಶಾಲಾ ಜ್ಞಾನದ ಸಮಾಜಶಾಸ್ತ್ರವನ್ನು ತೀವ್ರಗತಿಯಲ್ಲಿ ಪುನರ್‌ರಚಿಸುವ ಇಂಗಿತ ಇದರಲ್ಲಿದೆ. ನೂಲುವುದು, ನೇಯುವುದು, ಹೆಣಿಗೆ, ಚಮ್ಮಾರಿಕೆ, (ಚರ್ಮದ ಕೆಲಸ), ಕುಂಬಾರಿಕೆ (ಮಡಕೆ ಮಾಡುವುದು), ಬುಟ್ಟಿ ಹೆಣೆಯುವಿಕೆ (ಮೇದರ ಕೆಲಸ), ಕಮ್ಮಾರಿಕೆ (ಲೋಹದ ಕೆಲಸ) ಬಡಗಿ (ಮರಗೆಲಸ) ಕೆಲಸ ಮತ್ತು ಪುಸ್ತಕ ಬೈಂಡಿಂಗ್‌ನಂತಹ ಕರಕುಶಲಗಳ ಉತ್ಪಾದನಾ ಪ್ರಕ್ರಿಯೆಗೆ ಸಂಬಂಧಿಸಿದ ಜ್ಞಾನವು ಸಾಂಪ್ರದಾಯಿಕ ಸಾಮಾಜಿಕ ಶ್ರೇಣಿಯಲ್ಲಿ ಅತ್ಯಂತ ಕೆಳ ಹಂತದಲ್ಲಿರುವ ನಿರ್ದಿಷ್ಟ ಜಾತಿ ಗುಂಪುಗಳ ಏಕಸ್ವಾಮ್ಯವಾಗಿದೆ. ಅವುಗಳಲ್ಲಿ ಅನೇಕ 'ಅಸ್ಪೃಶ್ಯ' ಜಾತಿಗಳ ವರ್ಗಕ್ಕೆ ಸೇರಿವೆ. ಭಾರತದ ಸ್ಥಳೀಯ ಶಿಕ್ಷಣ ಸಂಪ್ರದಾಯ ಹಾಗೂ ವಸಾಹತುಶಾಹಿ ಶಿಕ್ಷಣ ವ್ಯವಸ್ಥೆಯು ಮೇಲ್ಜಾತಿಯವರ ಏಕಸ್ವಾಮ್ಯವಿದ್ದ (ಸಾಕ್ಷರತೆಯಂತಹ) ಕೌಶಲಗಳು ಮತ್ತು ಜ್ಞಾನಕ್ಕೆ ಒತ್ತನ್ನು ನೀಡಿದ್ದವು. ಅದರ ಜ್ಞಾನ ಮೀಮಾಂಸೆಗೆ ಸಂಬಂಧಿಸಿದಂತೆ ಗಾಂಧಿಯವರ ಪ್ರಸ್ತಾವನೆಯು ತಲೆಕೆಳಗಾಗಿದ್ದ ಶಿಕ್ಷಣ ವ್ಯವಸ್ಥೆಯನ್ನು ಸರಿಪಡಿಸುವ ಕೆಲಸ ಮಾಡಿತು. ಹಾಗಾಗಿ, 'ಮೂಲಭೂತ ಶಿಕ್ಷಣ'ದ ಸಾಮಾಜಿಕ ತಾತ್ವಿಕತೆ ಮತ್ತು ಪಠ್ಯಕ್ರಮವು ಅತ್ಯಂತ ಕೆಳ ಹಂತಕ್ಕೆ ಸೇರಿರುವ ಮಗುವಿನ ಪರವಾಗಿದೆ. ಹೀಗೆ ಅದು ಸಾಮಾಜಿಕ ಪರಿವರ್ತನೆಯ ಕಾರ್ಯಕ್ರಮವನ್ನು ಒಳಗೊಂಡಿದೆ. ಇದು 'ಶಿಕ್ಷಣ'ದ ಸಾಂಕೇತಿಕ ಅರ್ಥವನ್ನು ಬದಲಿಸಲು ಬಯಸುತ್ತದೆ ಮತ್ತು ಆ ಮೂಲಕ ಅಸ್ತಿತ್ವದಲ್ಲಿರುವ ಶಿಕ್ಷಣದ ಅವಕಾಶಗಳ ರಚನೆಯಲ್ಲಿ ಬದಲಾವಣೆಯನ್ನು ತರಲೂ ಕೂಡ ಪ್ರಯತ್ನಿಸುತ್ತದೆ.

ಉತ್ಪಾದನಾ ಪ್ರಕ್ರಿಯೆಯನ್ನು ಪರಿಚಯಿಸಲು ಸಲ್ಲಿಸಿದ ಪ್ರಸ್ತಾವನೆಗೆ ಗಾಂಧಿಯವರು ಕೊಟ್ಟ ಸಕಾರಣಗಳು ಇಲ್ಲಿ ಕೊಟ್ಟಿರುವ ವ್ಯಾಖ್ಯಾನದಷ್ಟು ಗಾಬರಿಹುಟ್ಟಿಸುವಂತವುಗಳಲ್ಲ. ಅವರು ಪ್ರಸ್ತಾಪಿಸಿದ ಸಕಾರಣಗಳೆಂದರೆ, ಎರಡು

ಕಾರಣಗಳಿಗಾಗಿ ಸಾಧ್ಯವಾದಷ್ಟು ಮಟ್ಟಿಗೆ ಶಾಲೆಗಳು ಸ್ವಾವಲಂಬಿಗಳಾಗಿರಬೇಕು. ಒಂದನೆಯದು, ಸಂಪೂರ್ಣವಾಗಿ ಹಣಕಾಸಿಗೆ ಸಂಬಂಧಿಸಿದ್ದು: ಅಂದರೆ ಶಾಲೆಗಳನ್ನು ನಡೆಸಲು ಬೇಕಾಗುವಷ್ಟು ಆರ್ಥಿಕ ಮತ್ತು ಭೌತಿಕ ಸಂಪನ್ಮೂಲಗಳನ್ನು ಸೃಷ್ಟಿಸಿಕೊಳ್ಳದಿದ್ದರೆ ಬಡ ಸಮಾಜವು ಅಲ್ಲಿನ ಎಲ್ಲ ಮಕ್ಕಳಿಗೂ ಶಿಕ್ಷಣವನ್ನು ಕೊಡಿಸಲು ಸಾಧ್ಯವಿಲ್ಲ. ಮತ್ತೊಂದು ರಾಜಕೀಯವಾದದ್ದು: ಹಣಕಾಸಿನ ಭದ್ರತೆ ಮಾತ್ರ ಪ್ರಭುತ್ವದ ಅವಲಂಬನೆಯನ್ನು ಮತ್ತು ಅದರ ಮಧ್ಯಪ್ರವೇಶವನ್ನು ತಪ್ಪಿಸಲು ಸಾಧ್ಯ ಎಂಬುದು. ಮೌಲ್ಯಗಳಾಗಿ ಸ್ವಾವಲಂಬನೆ ಹಾಗೂ ಸ್ವಾಯತ್ತತೆ ಇವೆರಡೂ ಗಾಂಧಿಯವರ ಹೃದಯಕ್ಕೆ ಹತ್ತಿರವಾದವು. ಅವು ಸತ್ಯ ಹಾಗೂ ಅಹಿಂಸೆಯ ಆಧಾರದ ಮೇಲೆ ನಿಂತಿದ್ದ ಅವರ ಸಮಾಜದ ಪರಿಕಲ್ಪನೆಯ ಭಾಗವಾಗಿದ್ದವು. ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಉತ್ಪಾದನಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಒಬ್ಬ ವ್ಯಕ್ತಿ ಯಾ ಒಂದು ಸಂಸ್ಥೆ ಬಹಳ ಕಾಲ 'ಸತ್ಯ'ಕ್ಕೆ ಅಂಟಿಕೊಂಡಿರಲು ಸಾಧ್ಯವಿಲ್ಲ. ಅಂತಹ ಒಬ್ಬ ವ್ಯಕ್ತಿ ಅಥವಾ ಒಂದು ಸಂಸ್ಥೆಯು ಹಿಂಸೆಯನ್ನು ಒಂದಲ್ಲ ಒಂದು ರೂಪದಲ್ಲಿ ಅನಿವಾರ್ಯಗೊಳಿಸುವ ಪ್ರಭುತ್ವವನ್ನು ಅವಲಂಬಿಸಿರಲೇಬೇಕಾಗುತ್ತದೆ. ಪ್ರಭುತ್ವದ ಶಿಕ್ಷಣ ವ್ಯವಸ್ಥೆ ಎನ್ನುವುದು ಗಾಂಧಿಯವರ ಶಿಕ್ಷಣದ ಪರಿಕಲ್ಪನೆಗೆ ತದ್ವಿರುದ್ಧವಾದುದಾಗಿತ್ತು. ಶಾಲೆಯು ತನ್ನ ನಿರ್ವಹಣೆಗಾಗಿ ತಾನೇ ಸಂಪನ್ಮೂಲಗಳನ್ನು ಕ್ರೂಢೀಕರಿಸಿಕೊಳ್ಳುವ ಸಾಧ್ಯತೆಯು ಈ ವೈರುಧ್ಯವನ್ನು ದಾಟಲು ಒಂದು ಮಾರ್ಗವನ್ನು ತೋರಿಸಿತು.

ಉತ್ಪಾದಕ ಶಾಲೆಗಳ ಚಿಂತನೆಯ ಮೂಲ ಸ್ಪಷ್ಟವಾಗಿ ಗಾಂಧಿಯವರು ದಕ್ಷಿಣ ಆಫ್ರಿಕಾದಲ್ಲಿ 1904 ರಲ್ಲಿ ಸ್ಥಾಪಿಸಿದ ಫೆನಿಕ್ಸ್ ಫಾರ್ಮ್ ಮತ್ತು 1910 ರಲ್ಲಿ ಸ್ಥಾಪಿಸಿದ ಟಾಲ್‌ಸ್ಟಾಯ್ ಫಾರ್ಮ್ ಎಂಬ ಎರಡು ಸಮುದಾಯಗಳಲ್ಲಿದೆ. ಗ್ರಾಮೀಣ ಸಮುದಾಯದಲ್ಲಿ ಬದುಕಿನ ಸಂಭಾವ್ಯತೆಯ ಬಗ್ಗೆ ಅವರಲ್ಲಿ ಕೊನೆಯವರೆಗೂ ಆಸಕ್ತಿ ಹಾಗೂ ವಿಶ್ವಾಸವನ್ನು ಈ ಸಮುದಾಯಗಳು ಹುಟ್ಟಿಸಿದವು. ಇದರಲ್ಲಿನ ಮೊದಲನೆಯ ಪ್ರಯೋಗವು ಜಾನ್ ರಸ್ಕಿನ್‌ನ 'ಅನ್ ಟು ದಿಸ್ ಲಾಸ್ಟ್' ನಿಂದ ಸ್ಪೂರ್ತಿಯನ್ನು ಪಡೆದಂತೆ ಕಾಣಿಸುತ್ತದೆ. ಇದರಿಂದ ಗಾಂಧಿ ಮೂರು ಪಾಠಗಳನ್ನು ಕಲಿಯುತ್ತಾರೆ ಅಥವಾ ಲೂಯಿ ಫಿಶರ್ ಹೇಳಿದ ಹಾಗೆ ಗಾಂಧಿಯವರು ಈ ಪುಸ್ತಕದಲ್ಲಿ ಮೂರು ಸಂದೇಶಗಳನ್ನು[3] ಕಂಡುಕೊಳ್ಳುತ್ತಾರೆ. ಒಳ್ಳೆಯ ಆರ್ಥಿಕತೆ ಎನ್ನುವುದು ಎಲ್ಲರ ಒಳಿತೇ ಹೊರತು ಮತ್ತೇನಲ್ಲ ಎನ್ನುವುದು ಮೊದಲನೆಯದು; ದೈಹಿಕ (ಕ್ಷೌರಿಕ ವೃತ್ತಿಯಂತಹ) ಶ್ರಮದ ಗಳಿಕೆಯು ಭೌದ್ಧಿಕ (ವಕೀಲಿ ವೃತ್ತಿಯಂತಹ) ಶ್ರಮದ ಗಳಿಕೆಯಷ್ಟೆ ಮೌಲ್ಯಯುತವಾದದ್ದು ಎನ್ನುವುದು ಎರಡನೆಯದು; ಮೂರನೆಯದೆಂದರೆ, ಅರ್ಥಪೂರ್ಣ ಬದುಕು ಎಂದರೆ ಕಾರ್ಮಿಕರದು ಅಥವಾ ಕರಕುಶಲಕಾರರದು. ರೈಲಿನ ಪ್ರಯಾಣದಲ್ಲಿ ರಸ್ಕಿನ್‌ನ ಪುಸ್ತಕವನ್ನು ಓದಿದ ನಂತರ ಈ ಸಂದೇಶಗಳನ್ನು ಆಚರಣೆಗೆ ತರಲು ತಾನು ನಿರ್ಧರಿಸಿದ್ದನ್ನು ಗಾಂಧಿಯವರು ತಮ್ಮ ಜೀವನಚರಿತ್ರೆಯಲ್ಲಿ ನೆನಪಿಸಿಕೊಳ್ಳುತ್ತಾರೆ.

ಗಾಂಧಿಯವರು 'ಮೂಲಭೂತ ಶಿಕ್ಷಣ'ದಲ್ಲಿ ಪ್ರಸ್ತಾಪಿಸಿದ 'ಒಳ್ಳೆಯ' ಬದುಕನ್ನು ಅವರು ಮೊದಲಿಗೆ, ಫೆನಿಕ್ಸ್ ಫಾರ್ಮ್ ನಲ್ಲಿ ಆಚರಣೆಗೆ ತಂದರು ಮತ್ತು ಕೆಲ ಕಾಲದ ನಂತರ ಟಾಲ್‌ಸ್ಟಾಯ್ ಫಾರ್ಮ್‌ನಲ್ಲಿ ಹೆಚ್ಚು ತೀವ್ರವಾಗಿ ಅಳವಡಿಸಿಕೊಂಡರು. ಹೆಸರೇ ಸೂಚಿಸುವಂತೆ ಈ ಎರಡನೆಯ ಪ್ರಯೋಗದ ವೇಳೆಗಾಗಲೆ ಗಾಂಧಿಯವರು ರಷಿಯಾದ ಬರಹಗಾರನಾದ ಲಿಯೊ ಟಾಲ್‌ಸ್ಟಾಯ್ ಬರಹಗಳನ್ನು ಓದಿದ್ದರು ಮತ್ತು ಅವನೊಂದಿಗೆ ಸಂಪರ್ಕವನ್ನು ಬೆಳೆಸಿದ್ದರು. ಟಾಲ್‌ಸ್ಟಾಯ್ ಅವರಿಂದ ಗಾಂಧಿಯವರು ಪಡೆದುಕೊಂಡ ಸ್ಪೂರ್ತಿಯು ಹಲವಾರು ಹಿತಾಸಕ್ತಿಗಳನ್ನು ಮತ್ತು ಕಾಳಜಿಗಳನ್ನು ಒಳಗೊಂಡಿತ್ತು. ಅದರಲ್ಲಿ ಪ್ರಧಾನವಾದದ್ದೆಂದರೆ ಮಾನವ ಸಮಾಜದಲ್ಲಿನ ಹಿಂಸೆಯ

ಮೂಲದ ವಿರುದ್ಧ ಹೋರಾಡಬೇಕು ಎನ್ನುವುದು. ವ್ಯಕ್ತಿಯು ನೆಮ್ಮದಿ ಮತ್ತು ಸ್ವಾತಂತ್ರ್ಯದಿಂದ ಬದುಕಬೇಕು ಮತ್ತು ಎಲ್ಲ ತರಹದ ಶೋಷಣೆಯನ್ನು ನಿರಾಕರಿಸಬೇಕು ಎಂಬುದು ಅವರನ್ನು ಗಾಂಧಿಯವರ ಹತ್ತಿರ ತಂದಿತು. ಟಾಲ್ಸ್‌ಟಾಯ್ 'ಯಸ್ನಾಯ ಪೋಲಿಯಾನಾ' ಎನ್ನುವ ನಿಯತಕಾಲಿಕದಲ್ಲಿ ಪ್ರಕಟಿಸಿದ ಶಿಕ್ಷಣದ ಬಗೆಗಿನ ಲೇಖನಗಳನ್ನು ಗಾಂಧಿಯವರು ಓದಿರದಿದ್ದರೂ ಕೂಡ 'ಶಿಕ್ಷಣವು ಮನುಷ್ಯರನ್ನು ಪೂರ್ವನಿಯೋಜಿತವಾಗಿ ಕೆಲವು ವಿನ್ಯಾಸಗಳ ಪ್ರಕಾರ ರೂಪಿಸುವುದಕ್ಕಾಗಿ ಎನ್ನುವುದು ಸತ್ವಹೀನವಾದುದು, ಕಾನೂನು ಬಾಹಿರ, ಮತ್ತು ಅಸಾಧ್ಯ'[4] ಎನ್ನುವ ಟಾಲ್ಸ್‌ಟಾಯ್ ಅವರ ಅಭಿಪ್ರಾಯವು ಖಂಡಿತಾ ಗಾಂಧಿಯವರದೂ ಆಗಿರುತ್ತಿತ್ತು.

ಶಾಲೆಯ ದಿನನಿತ್ಯದ ಪಠ್ಯಕ್ರಮದಲ್ಲಿ ಗಾಂಧಿಯವರು ಶಿಕ್ಷಕರಿಗೆ ಕೊಡಮಾಡಿದ ಸ್ವಾಯತ್ತತೆಯ ಹಕ್ಕು ಅವರು ಟಾಲ್ಸ್‌ಟಾಯ್ ಅವರೊಂದಿಗೆ ಹಂಚಿಕೊಂಡ ಉದಾರವಾದಿ ತತ್ವಗಳಿಗೆ ಪೂರಕವಾಗಿಯೆ ಇತ್ತು. ಭಾರತದ ಶಿಕ್ಷಕರನ್ನು ಅಧಿಕಾರಶಾಹಿ ಗುಲಾಮಿತನದಿಂದ ಮುಕ್ತಗೊಳಿಸಲು ಗಾಂಧಿಯವರು ಬಯಸಿದ್ದರು. ವಸಾಹತುಶಾಹಿ ಆಳ್ವಿಕೆಯಡಿಯಲ್ಲಿ ಶಾಲಾ ಶಿಕ್ಷಕರ ಕೆಲಸವನ್ನು ನಿಗದಿತ ಪಠ್ಯಪುಸ್ತಕಗಳಲ್ಲಿ ಅಧಿಕಾರಶಾಹಿಯ ಅಧಿಕಾರಿಗಳು ಸೇರಿಸಿದ ಜ್ಞಾನದ ಸ್ವರೂಪ ಮತ್ತು ಅಡಕಾಂಶಗಳನ್ನು ಪಸರಿಸುವ ಮತ್ತು ವಿಶದಪಡಿಸುವ ರೀತಿಯಲ್ಲಿ ವ್ಯಾಖ್ಯಾನಿಸಲಾಗಿತ್ತು. ಪಠ್ಯಪುಸ್ತಕಗಳ ಕಡ್ಡಾಯ ಬಳಕೆ ಹಾಗೂ ಶಿಕ್ಷಕರ ದುರ್ಬಲ ಸ್ಥಾನಗಳ ನಡುವಿನ ಸಂಬಂಧವನ್ನು ಗಾಂಧಿಯವರು ಬಿಚ್ಚಿಟ್ಟಿದ್ದು ಹೀಗೆ: 'ಪಠ್ಯಪುಸ್ತಕಗಳನ್ನು ಶಿಕ್ಷಣದ ವಾಹಕ ಎಂದು ಪರಿಗಣಿಸಿದರೆ ಶಿಕ್ಷಕರ ಜೀವಂತ ಪದಗಳಿಗೆ ಬೆಲೆಯೇ ಇರುವುದಿಲ್ಲ. ಪಠ್ಯಪುಸ್ತಕಗಳಲ್ಲಿರುವುದನ್ನು ಬೋಧಿಸುವ ಒಬ್ಬ ಶಿಕ್ಷಕ ತನ್ನ ಶಿಷ್ಯರಿಗೆ ಅದರ ಮೂಲಸತ್ವವನ್ನು ದಾಟಿಸುವುದಿಲ್ಲ'.[5] ಗಾಂಧಿಯವರ ಮೂಲಭೂತ ಶಿಕ್ಷಣವು ನಿಗದಿತ ಪಠ್ಯಪುಸ್ತಕ ಮತ್ತು ಪಠ್ಯಕ್ಕೆ ಶಿಕ್ಷಕರು ಅಡಿಯಾಳಾಗಿರುವುದನ್ನು ಅಂತ್ಯಗೊಳಿಸುವ ಇಂಗಿತವನ್ನು ಹೊಂದಿತ್ತು. ಸಂಪೂರ್ಣವಾಗಿ ಪಠ್ಯಪುಸ್ತಕಗಳ ನೆರವಿನಿಂದ ಅಳವಡಿಸಿಕೊಳ್ಳಲಾಗದ ಕಲಿಕೆಯ ಪರಿಕಲ್ಪನೆಯನ್ನು ಅದು ಒಳಗೊಂಡಿತ್ತು. ಅದಕ್ಕಿಂತ ಮುಖ್ಯವಾದದ್ದೆಂದರೆ ಪಠ್ಯಕ್ರಮಕ್ಕೆ ಸಂಬಂಧಿಸದ ವಿಷಯಗಳಲ್ಲಿ ಮೂಲಭೂತ ಶಿಕ್ಷಣವು ಶಿಕ್ಷಕರಿಗೆ ಕೊಟ್ಟ ಸ್ವಾತಂತ್ರ್ಯ ಮತ್ತು ಅಧಿಕಾರ. ಶಿಕ್ಷಕರು ಶಾಲಾ ಕೊಠಡಿಯಲ್ಲಿ ಏನು ಮಾಡಬೇಕು ಎಂದು ನಿಗದಿಪಡಿಸುವ ಅಧಿಕಾರವನ್ನು ಪ್ರಭುತ್ವಕ್ಕೆ ನಿರಾಕರಿಸುವಷ್ಟರ ಮಟ್ಟಿಗೆ ಅದೊಂದು ಉದಾರವಾದಿ ಯೋಜನೆಯಾಗಿತ್ತು. ಅವರ ವಿಶಾಲವಾದ ಸಾಮಾಜಿಕ ಬದುಕು ಮತ್ತು ರಾಜಕೀಯದ ತಾತ್ವಿಕತೆಗೆ ಪೂರಕವಾಗಿ ಗಾಂಧಿಯವರ ಶೈಕ್ಷಣಿಕ ಯೋಜನೆಯು ಪ್ರಭುತ್ವದ ಅಧಿಕಾರ ವ್ಯಾಪ್ತಿಯನ್ನು ತೀವ್ರಗತಿಯಲ್ಲಿ ಕಡಿತಗೊಳಿಸುವ ಇಂಗಿತ ಹೊಂದಿತ್ತು.

**ಸ್ವಾವಲಂಬನೆ**

ಗಾಂಧಿಯವರ ಪರಿಕಲ್ಪನಾತ್ಮಕ ಯೋಜನೆಯನ್ನು ಕ್ರೂಢೀಕರಿಸಿದ ನಂತರ ನಾವೀಗ ಅವರ ಕೇಂದ್ರ ಕಾಳಜಿಯ ಕಡೆಗೆ ಗಮನ ಹರಿಸಿ ಅದನ್ನು ಮತ್ತಷ್ಟು ಆಳವಾಗಿ ಪರಿಶೀಲಿಸೋಣ. ಮೂಲಭೂತ ಶಿಕ್ಷಣವೆನ್ನುವುದು ಗಾಂಧಿಯವರ ಅಭಿಪ್ರಾಯದಲ್ಲಿ, ಸ್ವಾವಲಂಬಿ ಪುಟ್ಟ ಸಮುದಾಯಗಳನ್ನೊಳಗೊಂಡ ಒಂದು ಆದರ್ಶ ಸಮಾಜದ ಗ್ರಹಿಕೆಯನ್ನು ಒಳಗೊಂಡಿತ್ತು. ಭಾರತದ ಹಳ್ಳಿಗಳಿಗೆ ಅಂತಹ ಸಮುದಾಯಗಳಾಗುವ ಸಾಮರ್ಥ್ಯವಿತ್ತು. ಐತಿಹಾಸಿಕವಾಗಿ ಭಾರತದ ಹಳ್ಳಿಗಳು ಸ್ವಾವಲಂಬಿಗಳಾಗಿದ್ದವು ಹಾಗಾಗಿ, ಅವುಗಳ ಸ್ವಾಯತ್ತತೆಯನ್ನು ಪುನರ್‌ಸ್ಥಾಪಿಸುವುದು ಮತ್ತು ಹಳ್ಳಿಗಳಲ್ಲಿ ಆರ್ಥಿಕ ಸ್ವಾವಲಂಬನೆ ಮತ್ತು ರಾಜಕೀಯ ಘನತೆಯನ್ನು ಸೃಷ್ಟಿಸುವುದು ನಾವು ಮಾಡಬೇಕಾದ ದೊಡ್ಡ ಕೆಲಸ ಎಂದು ಅವರು ನಂಬಿದ್ದರು. ನಗರದಲ್ಲಿರುವವರ ಶೋಷಣೆಗೆ ಒಳಗಾಗುವಂತೆ ಮಾಡಿ ಗ್ರಾಮಗಳ

ಆರ್ಥಿಕತೆಯನ್ನು ವಸಾಹತುಶಾಹಿ ಆಳ್ವಿಕೆಯು ಹಾಳುಗೆಡವಿದೆ ಎಂದು ಅವರು ಭಾವಿಸಿದರು. ವಸಾಹತುಶಾಹಿಯಿಂದ ಸ್ವಾತಂತ್ರ್ಯವನ್ನು ಪಡೆಯುವುದೆಂದರೆ ಒಂದು ಕಾರ್ಯಸಾಧುವಾದ ಸಮುದಾಯವಾಗಿ ಗ್ರಾಮವನ್ನು ಮತ್ತು ಅದರ ಬೆಳವಣಿಗೆಯನ್ನು ಸಬಲಗೊಳಿಸುವುದು ಎಂದರ್ಥ. ಮಕ್ಕಳಿಗೆ ಉತ್ಪಾದಕ ಕೆಲಸಗಳಲ್ಲಿ ತರಬೇತಿ ಕೊಡುವುದರ ಮೂಲಕ ಮತ್ತು ಒಂದು ಸಹಕಾರಿ ಸಮುದಾಯದಲ್ಲಿ ಬದುಕಲು ಬೇಕಾದ ಧೋರಣೆ ಮತ್ತು ಮೌಲ್ಯಗಳನ್ನು ಹೇಳಿಕೊಡುವುದರ ಮೂಲಕ ಮೂಲಭೂತ ಶಿಕ್ಷಣವು ಗ್ರಾಮವನ್ನು ಆ ಹಾದಿಯಲ್ಲಿ ಕೊಂಡೊಯ್ಯುವ ಇಂಗಿತವನ್ನು ಹೊಂದಿತ್ತು.

ಅಭಿವೃದ್ಧಿಯ ಈ ಯೋಜನೆಯ ಬೇರು ಕೈಗಾರೀಕರಣವು ಮಾನವನ ಪರಿಶುದ್ದತೆಗೆ ಅಪಾಯವನ್ನೊಡ್ಡುತ್ತದೆ ಎನ್ನುವ ಗಾಂಧಿಯವರ ಅಭಿಪ್ರಾಯದಲ್ಲಿದೆ. ತಾಂತ್ರಿಕತೆಯ ಬಗ್ಗೆ ಗಾಂಧಿಯವರ ಅಭಿಪ್ರಾಯ ನಿಜಕ್ಕೂ ಏನಾಗಿತ್ತು ಎನ್ನುವದರ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಅವರು ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲ ಸತ್ವಕ್ಕೆ ವಿರುದ್ಧವಾಗಿದ್ದರೇ ಅಥವಾ ಅವರ ವಿರೋಧವು ಯುರೋಪಿಯನ್ ಸಮಾಜಗಳನ್ನು ಶೋಷಿಸುತ್ತಿದ್ದ ಪಾಶ್ಚಾತ್ಯ ಮಾದರಿಯ ಆಧುನಿಕತೆ ಹೇಗೆ ಬಳಕೆಯಾಗುತ್ತಿತ್ತು ಎನ್ನುವುದಕ್ಕೆ ಸೀಮಿತವಾಗಿತ್ತೇ ಎನ್ನುವುದು ಸ್ಪಷ್ಟವಿಲ್ಲ. ಅವರ ಬರಹದ ಸಂಗ್ರಹಗಳಲ್ಲಿ ನಮಗೆ ಎರಡೂ ಅಭಿಪ್ರಾಯಗಳಿಗೂ ಪೂರಕವಾಗಿರುವ ಸಾಕಷ್ಟು ಪುರಾವೆಗಳು ಲಭಿಸುತ್ತವೆ. ಈ ವಿಷಯಕ್ಕೆ (ಮತ್ತು ಇತರ ವಿಷಯಗಳಲ್ಲೂ) ಸಂಬಂಧಿಸಿದಂತೆ ಬಹುಶಃ ಇದು ಅಥವಾ ಅದು ಎನ್ನುವ ಉತ್ತರವನ್ನು ಹುಡುಕುವುದು ತಪ್ಪು ಎನಿಸುತ್ತದೆ, ಅವರೊಬ್ಬ ಸಿದ್ಧಾಂತಿಯಾಗಿರುವುದಕ್ಕೂ ಹೆಚ್ಚಾಗಿ ಪ್ರತಿಕ್ರಿಯೆ ಮತ್ತು ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲು ಸದಾ ಸಿದ್ಧವಾಗಿದ್ದ ವ್ಯಕ್ತಿಯಾಗಿದ್ದರು. ಮೊದಲಿಗೆ ಒಂದು ಸಾಂಕೇತಿಕ ಮಾದರಿಯನ್ನು ತಯಾರಿಸಿಕೊಂಡು ಕ್ರಿಯೆಗೆ ತೊಡಗುವುದು ಅವರ ಶೈಲಿಯಾಗಿರಲಿಲ್ಲ. ವಿಜ್ಞಾನ ಮತ್ತು ಕೈಗಾರೀಕರಣದ ಸಂದರ್ಭದಲ್ಲಿ ಅವರು ಭಾರತದಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ಮತ್ತು ಕೈಗಾರಿಕಾ ಅಬಿವೃದ್ಧಿಯ ವೇಗವನ್ನು ನಿಯಂತ್ರಿಸುವ ದಿಕ್ಕಿನಲ್ಲಿ ಕಾರ್ಯನಿರತರಾಗಿದ್ದರು ಎಂದು ಕಾಣಿಸುತ್ತದೆ. ಕೈಗಾರೀಕರಣಗೊಂಡ ಪಶ್ಚಿಮದಿಂದ ಮತ್ತು ಭಾರತದೊಳಗಿನ ಬಂಡವಾಳಶಾಹಿ ಒತ್ತಡ ಗುಂಪಿನಿಂದ ಬಂದ ತಾಂತ್ರಿಕತೆ ಹಾಗೂ ಮಾರುಕಟ್ಟೆಯ ಒತ್ತಡಗಳ ಹಿನ್ನೆಲೆಯಲ್ಲಿ ಆಯ್ಕೆಯನ್ನು ಮಾಡಲು ಸಾಧ್ಯವಾಗುವಂತೆ ಭಾರತವು ಮೊದಲಿಗೆ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಅಭಿವೃದ್ಧಿ ಹೊಂದಬೇಕಿತ್ತು.

ಒಂದು ಕಾರ್ಯಸಾಧುವಾದ ರಾಜಕೀಯ ವ್ಯವಸ್ಥೆಯನ್ನು ವ್ಯವಸ್ಥಿತಗೊಳಿಸುವುದು ಮೊದಲಿಗೆ, ನಂತರ ಯಂತ್ರಗಳ ಮೂಲಕ ಉತ್ಪಾದನಾ ಪ್ರಕ್ರಿಯೆಯನ್ನು ಅಭಿವಧ್ಧಿಪಡಿಸುವುದು ಆಮೇಲೆ ಬರುವ ಹಾಗೆ ಕಾಲಾನುಕ್ರಮದಲ್ಲಿ ಆದ್ಯತೆಗಳನ್ನು ವ್ಯವಸ್ಥೆಗೊಳಿಸುವುದು ಎನ್ನುವ ರೀತಿಯಲ್ಲಿ ಅವರ ಯೋಜನೆಯನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ. ಗಾಂಧಿಯವರ ಪ್ರಕಾರ ಭಾರತಕ್ಕೆ ಕಾರ್ಯಸಾಧುವಾದ ರಾಜಕೀಯ ವ್ಯವಸ್ಥೆಯು ಗ್ರಾಮಗಳ ಗಣರಾಜ್ಯಗಳಲ್ಲಿ ಕೇಂದ್ರೀಕೃತಗೊಂಡು 'ವೃತ್ತದೊಳಗಿನ ವೃತ್ತ'ದಂತೆ ಸಂಘಟಿತವಾಗಿರಬೇಕು. ಸ್ಥಳೀಯ ಶಕ್ತಿಯನ್ನು ವಿಶಾಲವಾದ ಸಮಾಜಕ್ಕೆ ಇರುವ ಬದ್ಧತೆಯೊಂದಿಗಿನ ಜೋಡಣೆಯ ತತ್ವವನ್ನು ತಿಳಿಸಲು ಈ ರೂಪಕವನ್ನು ಬಳಸಲಾಗಿದೆ. ಗ್ರಾಮದಲ್ಲಿರುವ ಜನರು ಆಧುನೀಕರಣದ ಒತ್ತಡದಲ್ಲಿ ತಮ್ಮ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳಲು ಸಮರ್ಥರಾಗುವಂತೆ ಮಾಡಲು ಉತ್ಪಾದನಾ ವಿಧಾನಗಳ ಆಧುನೀಕರಣಕ್ಕೂ ಮೊದಲೇ ಅಂತಹ ರಾಜಕೀಯ ವ್ಯವಸ್ಥೆಯು ಬರಬೇಕು ಎಂದು ಅವರು ಬಯಸಿದ್ದರು[6]. ಅವರ ಶೈಕ್ಷಣಿಕ ಯೋಜನೆಯು ಆದ್ಯತೆಗಳ ಈ

ಅನುಕ್ರಮಣಿಕೆಗೆ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಕೈಗಾರೀಕರಣದ ಪ್ರಗತಿಯನ್ನು ನಿಧಾನಗೊಳಿಸಿದರೆ ಮತ್ತು ಸಾಮಾಜಿಕ ಹಾಗೂ ರಾಜಕೀಯ ಪ್ರಗತಿಯ ಯೋಜನೆಗೆ ಪೂರಕವಾಗಿ ರೂಪುಗೊಳಿಸಿದರೆ ಅಂತಹ ಪ್ರಗತಿಯಲ್ಲಿ ಮೂಲಭೂತ ಶಿಕ್ಷಣವು ಕೆಲವು ನಿರ್ದಿಷ್ಟವಾದ ಉದ್ದೇಶಗಳನ್ನು ಈಡೇರಿಸುತ್ತದೆ. ಹೆಚ್ಚು ನಿರ್ದಿಷ್ಟವಾಗಿ ಹೇಳುವುದಾದರೆ, ಭಾರಿ ಯಾಂತ್ರೀಕರಣ ಸಂಸ್ಥಾಪನೆಗಳೊಂದಿಗೆ ಯಾವುದೇ ಸ್ಪರ್ಧೆ ಮಾಡದೆ ತಮಗೆ ಬೇಕಾದ್ದನ್ನು ಗ್ರಾಮಗಳು ಉತ್ಪಾದಿಸುವ ಹಕ್ಕನ್ನು ರಕ್ಷಿಸುವುದು ಅರ್ಥಪೂರ್ಣ ಕೈಗಾರೀಕರಣದ ಅರ್ಥವೆಂದಾದರೆ ಅಂತಹ ಯೋಜನೆಯಡಿಯಲ್ಲಿ ಗ್ರಾಮೀಣ ಮಕ್ಕಳ ಉತ್ಪಾದಕ ಸಾಮರ್ಥ್ಯವನ್ನು ಮೂಲಭೂತ ಶಿಕ್ಷಣವು ಹೆಚ್ಚಿಸುತ್ತದೆ.

ಗಾಂಧಿಯವರ ಆದರ್ಶರಾಜ್ಯದಲ್ಲಿನ (ಯುಟೋಪಿಯಾ) ಆದರ್ಶ ಪ್ರಜೆಯು ಒಂದು ಸಣ್ಣ ಸಮುದಾಯದಲ್ಲಿ ಕಷ್ಟಪಟ್ಟು ದುಡಿಯುವ, ಆತ್ಮಗೌರವವುಳ್ಳ ಮತ್ತು ಧಾರಾಳತನದ ವ್ಯಕ್ತಿಯಾಗಿದ್ದ. ಮನುಷ್ಯನ ಈ ಚಿತ್ರಣ ಮತ್ತು ಅದನ್ನು ಬಾಳಿಸಿಕೊಂಡು ಬರುವ ಉತ್ಪಾದಕ ವ್ಯವಸ್ಥೆಯ ಕಲ್ಪನೆಯು ಅಮೇರಿಕಾದ ತತ್ವಶಾಸ್ತ್ರಜ್ಞ ಜಾನ್ ಡೀವೆ (1859-1952) ಅನ್ನು ನೆನಪಿಗೆ ತರುತ್ತದೆ. ಈ ಇಬ್ಬರು ಸಮಕಾಲೀನರ ಶೈಕ್ಷಣಿಕ ದೃಷ್ಟಿಕೋನವನ್ನು ಹೋಲಿಕೆ ಮಾಡಿ ನೋಡುವುದು ಉಪಯುಕ್ತವೆನಿಸುತ್ತದೆ. ಗಡಿ ಪ್ರದೇಶಗಳು ಇನ್ನೂ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಡೀವೆ ಬೆಳೆದನು. ಡೀವೆಯು, ಯೌವನದಲ್ಲಿ ಕೌಶಲವನ್ನು ಹೊಂದಿದ ಕಷ್ಟಪಟ್ಟು ದುಡಿಯುವ ಮತ್ತು ಸಮುದಾಯಕ್ಕೆ ಮುಖ್ಯವಾಗಿರುವ ವ್ಯಕ್ತಿತ್ವವನ್ನು ಬೆಳೆಸಿಕೊಂಡ ಪುರುಷರು ಮತ್ತು ಮಹಿಳೆಯರನ್ನು ಒಳಗೊಂಡ ಒಂದು ಸಣ್ಣ ಸಮುದಾಯವು ಆದರ್ಶಯುತವಾದ ಪ್ರಜಾಪ್ರಭುತ್ವದ ಘಟಕ ಎಂದು ಭಾವಿಸಿದ್ದನು. ಬೆಳೆಯುತ್ತಿರುವ ಬಂಡವಾಳಶಾಹಿ ಆರ್ಥಿಕತೆಯು ಬೇಡುವ ರಾಜಕೀಯ ಹಾಗೂ ಸಂಸ್ಕೃತಿಯ ಸ್ವರೂಪ ಇನ್ನೂ ಬೆಳಕಿಗೆ ಬಂದಿರಲಿಲ್ಲ. ತನ್ನ 'ಡೆಮಾಕ್ರಸಿ ಅಂಡ್ ಎಜುಕೇಷನ್ (*'ಪ್ರಜಾಪ್ರಭುತ್ವ ಹಾಗೂ ಶಿಕ್ಷಣ)'* ಎಂಬ ಪ್ರಖ್ಯಾತ ಕೃತಿಯಲ್ಲಿ ಡೀವೆಯು ಜವಾಬ್ದಾರಿಯುತ ವ್ಯಕ್ತಿಗಳನ್ನೊಳಗೊಂಡ ಆದರ್ಶಯುತ ಪುಟ್ಟ ಸಮುದಾಯವನ್ನು ಆಧಾರವಾಗಿಟ್ಟುಕೊಂಡು ಶ್ರಮಾಧಾರಿತ ಕಲಿಕೆಯ ಪರಿಕಲ್ಪನೆಯನ್ನು ಮುಂದಿಟ್ಟನು. ಉತ್ಪಾದಕ ಶ್ರಮ ಮತ್ತು ಶಿಕ್ಷಣ ಇವೆರಡನ್ನು ಜೋಡಿಸುವುದು ಗಾಂಧಿಯವರ ಮಾದರಿಯೂ ಆಗಿತ್ತು ಮತ್ತು ಅದರ ಮೂಲವೂ ಅವರ ಯುಟೋಪಿಯಾದ ಆದರ್ಶಯುತವಾದ ಗ್ರಾಮ ಗಣರಾಜ್ಯವಾಗಿದ್ದು ಡೀವೆಯ ಚಿಂತನೆಗಿಂತ ಅಷ್ಟೇನೂ ಭಿನ್ನವಾಗಿರಲಿಲ್ಲ. ಆದರೆ ಡೀವೆಯು ಅವನ ದೇಶದಲ್ಲಿ ಬಂಡವಾಳಶಾಹಿ ಹಾದಿಯಲ್ಲಿ ಸಾಗುತ್ತಿದ್ದ ಅಭಿವೃದ್ಧಿಗೆ ಸಂಬಂಧಿಸಿದಂತೆ ತನ್ನ ಪ್ರಜಾಪ್ರಭುತ್ವ ಸಮುದಾಯದ ಚಿತ್ರಣವನ್ನು ರೂಪಿಸಿದ್ದು ಸ್ವಲ್ಪ ತಡವಾಗಿ. ಆದರೆ ಗಾಂಧಿ, ತಮಗೆ ಆಯ್ಕೆಯ ಸಾಧ್ಯತೆ ಇನ್ನೂ ಇದೆ ಎಂದೆನಿಸಿದಾಗ ತನ್ನ ಆದರ್ಶ ಗ್ರಾಮದ ಚಿತ್ರಣವನ್ನು ಮುಂದಿಟ್ಟರು. ಅಷ್ಟಲ್ಲದೆ, ಡೀವೆಯ ಯೋಜನೆಗಳು ಗಾಂಧಿಯ ಯೋಜನೆಯಂತೆ ಸಾಂಪ್ರದಾಯಿಕ ಕರಕುಶಲ ಕಲೆಗಳನ್ನು ಆಧರಿಸಿದ ಉತ್ಪಾದಕ ಪ್ರಕ್ರಿಯೆಗಳಾಗಿರಲಿಲ್ಲ. ಆದರೆ ಅವೆರಡೂ ಬಂಡವಾಳಶಾಹಿ ಬೆಳವಣಿಗೆಯ ಪ್ರಾರಂಭದ ಹಂತದ ತಾತ್ವಿಕ ನೆಲೆಯನ್ನು ಹೊಂದಿದ್ದವು. ಹಿಂತಿರುಗಿ ನೋಡಿದಾಗ, ಡೀವೆಯ ಶೈಕ್ಷಣಿಕ ಪ್ರಸ್ತಾವನೆಯು ಬೇಕಾಬಿಟ್ಟಿಯಾದ, ಅಮಾನವೀಯವಾದ ಬಂಡವಾಳಶಾಹಿ ಬೆಳವಣಿಗೆಯ ನಡುವೆ ಮಕ್ಕಳಿಗೆ ಅಗತ್ಯವಾದ ನೆಲೆಯನ್ನು ಕಂಡುಕೊಳ್ಳಲು ಮಾಡಿದ ಪ್ರಯತ್ನದಂತೆ ಕಾಣಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಗಾಂಧಿಯವರದು ಪುರುಷ ಮತ್ತು ಮಹಿಳೆಯರಿಬ್ಬರೂ ಯಂತ್ರಗಳೊಂದಿಗೆ ಬದುಕಲು ಬೇಕಾದ ಸಾಮರ್ಥ್ಯಗಳನ್ನು ಬಲಗೊಳಿಸಲು ಬೇಕಾದ ಸಮಯಕ್ಕಾಗಿ ಬಂಡವಾಳಶಾಹಿಯ ಬೆಳವಣಿಗೆಯನ್ನು ನಿಧಾನಗೊಳಿಸುವ ಹಂಬಲದಂತೆ ಕಾಣಿಸುತ್ತದೆ.

ಗಾಂಧಿ ಮತ್ತು ಡೀವೆಯವರ ಈ ಹೋಲಿಕೆಯನ್ನು ನಾವು ಮುಂದುವರೆಸಿದರೆ ನಾವು ಈ ಇಬ್ಬರು ಶಿಕ್ಷಣ ತಜ್ಞರ ನಡುವೆ ಮತ್ತೊಂದು ಸಾಮ್ಯತೆಯನ್ನು ಕಾಣುತ್ತೇವೆ: ಇಬ್ಬರೂ ಸಂಪೂರ್ಣವಾದ ಸೆಕ್ಯುಲರ್/ಜಾತ್ಯತೀತ ಭೋಧನಾಶಾಸ್ತ್ರವನ್ನು ಪ್ರತಿಪಾದಿಸಿದರು. ಗಾಂಧಿಯವರಿಗೆ ಸಂಬಂಧಿಸಿದಂತೆ ಇದು ಆಶ್ಚರ್ಯವನ್ನು ಹುಟ್ಟಿಸುವಂತಾದ್ದು. ಏಕೆಂದರೆ, ಶಿಕ್ಷಣ ಒಂದನ್ನು ಬಿಟ್ಟು ಉಳಿದ ಎಲ್ಲ ವಲಯಗಳಲ್ಲೂ ಗಾಂಧಿ ಆಳವಾದ ರಿಲಿಜಿಯಸ್/ಧಾರ್ಮಿಕ ಭಾವನೆಯುಳ್ಳ ವ್ಯಕ್ತಿಯಾಗಿ ಕ್ರಿಯಾಶೀಲರಾಗಿದ್ದರು. ಶಿಕ್ಷಣದ ವಿಷಯದಲ್ಲೂ ಕೂಡ ಸಂಪೂರ್ಣವಾಗಿ ಸೆಕ್ಯುಲರ್ ನಿಲುವಿಗೆ ಅಂಟಿಕೊಳ್ಳಲು ಅವರಿಗೆ ಮನಸಿರಲಿಲ್ಲ, ಆದರೆ ಅವರ ಮೂಲಭೂತ ಶಿಕ್ಷಣವು ಯಾವುದೇ ಧಾರ್ಮಿಕ/ರಿಲಿಜಿಯಸ್ ಬೋಧನೆಗೆ ಅವಕಾಶವನ್ನು ನೀಡುವುದಿಲ್ಲ ಎನ್ನುವುದು ಮಾತ್ರ ವಾಸ್ತವ. 1938 ರಲ್ಲಿ ಈ ವಿಷಯದ ಬಗ್ಗೆ ಅವರ ಅಭಿಪ್ರಾಯವೇನು ಎಂದು ಶಿಕ್ಷಣ ತಜ್ಞರ ನಿಯೋಗವು ಅವರನ್ನು ಒತ್ತಾಯಿಸಿದಾಗ ಅವರು ಕೊಟ್ಟ ಉತ್ತರ:

ನಾವು ವಾರ್ಧಾ ಶಿಕ್ಷಣ ಯೋಜನೆಯಿಂದ ರಿಲಿಜಿಯಸ್ ಬೋಧನೆಯನ್ನು ಕೈಬಿಟ್ಟಿದ್ದೇವೆ. ಏಕೆಂದರೆ, ಇಂದು ಬೋಧಿಸಲ್ಪಡುತ್ತಿರುವ ಮತ್ತು ಆಚರಿಸಲ್ಪಡುತ್ತಿರುವ ಧರ್ಮಗಳು/ರಿಲಿಜಿಯನ್‌ಗಳು ಒಗ್ಗಟ್ಟನ್ನು ತರುವ ಬದಲು ಸಂಘರ್ಷವನ್ನು ಹುಟ್ಟುಹಾಕುತ್ತಿವೆ. ಆದರೆ ಮತ್ತೊಂದು ರೀತಿಯಲ್ಲಿ ಎಲ್ಲ ರಿಲಿಜಿಯನ್‌ಗಳಿಗೂ ಸಾಮಾನ್ಯವಾಗಿರುವ ಸತ್ಯವನ್ನು ಎಲ್ಲ ಮಕ್ಕಳಿಗೂ ಹೇಳಿಕೊಡಲು ಸಾಧ್ಯ ಮತ್ತು ಹೇಳಿಕೊಡಬೇಕು ಎಂದು ನಾನು ನಂಬುತ್ತೇನೆ. ಈ ಸತ್ಯವನ್ನು ಪದಗಳ ಮೂಲಕವಾಗಲಿ ಪುಸ್ತಕಗಳ ಮೂಲಕವಾಗಲಿ ಕಲಿಸಲು ಸಾಧ್ಯವಿಲ್ಲ - ಮಕ್ಕಳು ಈ ಸತ್ಯವನ್ನು ಶಿಕ್ಷಕರ ದಿನನಿತ್ಯದ ಬದುಕಿನಿಂದ ಕಲಿಯಬಹುದು. ಶಿಕ್ಷಕರು ಸ್ವತಃ ಸತ್ಯ ಮತ್ತು ನ್ಯಾಯದ ಸೂತ್ರಗಳಿಗೆ ಬದ್ಧರಾಗಿದ್ದರೆ ಆಗ ಮಾತ್ರ ಸತ್ಯ ಮತ್ತು ನ್ಯಾಯ ಎನ್ನುವುದು ಎಲ್ಲ ರಿಲಿಜಿಯನ್‌ಗಳ ಬುನಾದಿಯಾಗಿದೆ ಎಂದು ಮಕ್ಕಳು ಕಲಿಯುತ್ತಾರೆ[7].

ಅವರು ನಂಬಿದ ಶಿಕ್ಷಣದ ರಿಲಿಜಿಯಸ್ ಪಾತ್ರ ಮತ್ತು ಶಿಕ್ಷಕರ ನೈತಿಕ ಬಿಂಬವನ್ನು ಎತ್ತಿ ಹಿಡಿಯುವ ಸೆಕ್ಯುಲರ್ ಶಿಕ್ಷಣದ ನಡುವೆ ಇರುವ ಸಂಘರ್ಷವನ್ನು ಗಾಂಧಿಯವರು ಬಗೆಹರಿಸಿರುವುದು ಎದ್ದು ಕಾಣಿಸುತ್ತದೆ. ಶಿಕ್ಷಕರು ತಮ್ಮ ಆಚರಣೆಯಲ್ಲಿ ತರುವ ಮೂಲಕ ಎಲ್ಲ ರಿಲಿಜಿಯನ್‌ಗಳ (ಒಂದೇ ಆಗಿರುವ) ಸತ್ಯವನ್ನು ದಾಟಿಸುತ್ತಾರೆ ಎಂದು ಪ್ರತಿಪಾದಿಸುವ ಮೂಲಕ ಗಾಂಧಿಯವರು ಒಂದು ಅಸಾಮಾನ್ಯವಾದ ಬೇಡಿಕೆಯನ್ನು ಇಡುತ್ತಿದ್ದಾರೆ. ಅಂತಹ ಬೇಡಿಕೆಯು ವಾಸ್ತವದಲ್ಲಿ ಅಸಾಧ್ಯ ಎನ್ನುವುದು ಅವರನ್ನು ಬಾಧಿಸಿತೆ ಇಲ್ಲವೆ ಎನ್ನುವುದು ಬೇರೆಯದೇ ಸಂಗತಿ. ಬಹಳಷ್ಟು ಮಟ್ಟಿಗೆ ಹಾಗಾಗಿರುವುದಿಲ್ಲ. ಏಕೆಂದರೆ ಸಾಮಾನ್ಯ ಜನರನ್ನು ಬಾಧಿಸುವ ದೈಹಿಕ, ಬೌದ್ಧಿಕ ಮತ್ತು ನೈತಿಕ ಮಿತಿಗಳನ್ನು ಕಡಗಣಿಸುವುದು ಅವರಿಗೆ ಸಾಮಾನ್ಯವಾಗಿತ್ತು ಮತ್ತು ರಾಜಕೀಯದಲ್ಲಿ ಸಕ್ರಿಯವಾಗಿದ್ದು ಒಬ್ಬ ಶ್ರೇಷ್ಠ ಶಿಕ್ಷಣ ತಜ್ಞರಾಗಿದ್ದ ಅವರು ಸಾಮಾನ್ಯ ಜನರು ಅಸಾಮಾನ್ಯ ಕೆಲಸವನ್ನು ಮಾಡುವಂತೆ ಮಾಡಿದ್ದರು ಎನ್ನುವುದು ನಿಜ. ನಾವು ಗಮನಿಸಬೇಕಾದ ಮುಖ್ಯ ಸಂಗತಿ ಎಂದರೆ ನೈತಿಕವಾಗಿ ಸರಿಯಾಗಿರಬೇಕಾದ ದಿನನಿತ್ಯದ ಆಚರಣೆಯಲ್ಲಿ ಶಿಕ್ಷಕರು ತೊಡಗಬೇಕು ಎಂದು ಆಗ್ರಹಿಸುವ ಮೂಲಕ ಗಾಂಧಿಯವರು ಕೇವಲ ವೃತ್ತಿಪರ ಧೋರಣೆಯ ಬದಲಾಗಿ ಶಿಕ್ಷಕರು ರಿಲಿಜಿಯಸ್ ಪಾತ್ರವನ್ನು ವಹಿಸಬೇಕೆಂಬುದು ಅವರ ಆಯ್ಕೆಯಾಗಿತ್ತು. ಇದರ ಜೊತೆಯಲ್ಲಿ ಆಶ್ರಮದಲ್ಲಿ ಗುರುವು ತನ್ನ ಶಿಷ್ಯರೊಂದಿಗೆ ಇರುವ ಚಿರಪರಿಚಿತವಾದ ಭಾರತೀಯ ಪರಂಪರೆಯನ್ನು ಅವರು ಬಳಕೆ ಮಾಡಿಕೊಂಡರು. ಒಂದು ಆದರ್ಶಯುತವಾದ ಆಶ್ರಮ ಸಮುದಾಯದಲ್ಲಿ ಹೇಗೆ ಬದುಕಬೇಕು ಎನ್ನುವ ಬಗ್ಗೆ ಸ್ವತಃ ಗುರುವು ಉದಾಹರಣೆಯಾಗಿರಬೇಕಿತ್ತು. ಇಂತಹ ಉನ್ನತವಾದ ದಿನನಿತ್ಯದ ಬದುಕಿನಿಂದಾಗಿ ಅವರು ಶಿಷ್ಯರುಗಳು ಮಾಡಬಹುದಾದ ತ್ಯಾಗವನ್ನು ನಿರೀಕ್ಷಿಸಲು ಅವರಿಗೆ ಅನುಮತಿ ಇತ್ತು. ಈ ಅರೆ-ಪುರಾಣದ ಕಲ್ಪನೆಯು ಗಾಂಧಿಯವರಿಗೆ ಅವರ ಮೂಲಭೂತ ಶಿಕ್ಷಣದ ಪ್ರಸ್ತಾವನೆಗೆ ಪೂರಕವಾಗಿರುವಂತೆ ಶಿಕ್ಷಣದಲ್ಲಿ ಸುಧಾರಣೆಗೆ

ಬೇಕಾದ ವಾಕ್ಪಟುತ್ವವನ್ನು ನೀಡಿತ್ತು. ಆಧುನಿಕ ಶಿಕ್ಷಣದ ಪರಿಕಲ್ಪನೆ ಮತ್ತು ಬೋಧನಾಶಾಸ್ತ್ರವನ್ನು ಭವ್ಯ ಭಾರತೀಯ ಪರಂಪರೆಯ ಚೌಕಟ್ಟಿನಲ್ಲಿಡುವ ಭರವಸೆಯನ್ನು ಇದು ಕೊಟ್ಟಿತು.

**ವಿರೋಧ**

ಆದರೆ ಅತಿಯಲ್ಲದ ಈ ತಂತ್ರ, ಮೂಲಭೂತ ಶಿಕ್ಷಣವನ್ನು ಟೀಕೆಗಳಿಂದ ತಪ್ಪಿಸಲಾಗಲಿಲ್ಲ, ಅದಕ್ಕೆ, ಮೊದಲಿನಿಂದಲೂ ಅದು ನಿರ್ಲಕ್ಷ ಮತ್ತು ಅವಗಣನೆಗೆ ಗುರಿಯಾಯಿತು. ಗಾಂಧಿಯವರ ಪ್ರಸ್ತಾವನೆಗೆ ಎದುರಾದ ವಿರೋಧವನ್ನು ಭಾರತದ ಸ್ವಾತಂತ್ರ ಹೋರಾಟದ ಅಂತಿಮ ದಶಕದ ರಾಜಕೀಯ ಕದನಗಳಿಂದ ಪ್ರತ್ಯೇಕಿಸಲಾಗುವುದಿಲ್ಲ. ಉತ್ತರ ಭಾರತದ ಮುಸ್ಲೀಮ್ ಲೀಗ್ ಮೂಲಭೂತ ಶಿಕ್ಷಣವನ್ನು 'ಹಿಂದೂ ಹುನ್ನಾರ'ವೆಂದು ವರ್ಣಿಸಿತು. ಹೀಗೆ ಟೀಕೆ ಮಾಡಿದವರಿಗೆ ಗಾಂಧಿಯ ಯೋಜನೆಯಲ್ಲಿದ್ದ ಸೆಕ್ಯುಲರ್ ಲಕ್ಷಣಗಳು ಕಾಣಿಸಲೇ ಇಲ್ಲ. ಅದಕ್ಕೆ ವ್ಯತಿರಿಕ್ತವಾಗಿ ಗಾಂಧಿಯವರ ಪ್ರಸ್ತಾವನೆಯೊಂದಿಗೆ ಬಂದ ಮತ್ತು ಅದರ ಕೆಲವು ಸಮಾನ ಲಕ್ಷಣಗಳುಳ್ಳ ಒಂದು ಯೋಜನೆಯು ಅತಿಯಾಗಿ ಅವರ ಗಮನವನ್ನು ಸೆಳೆಯಿತು. ಕೇಂದ್ರ ಪ್ರಾಂತ್ಯದಲ್ಲಿದ್ದ ರವಿ ಶಂಕರ್ ಶುಕ್ಲಾ ಅವರು ಮುಂದಿಟ್ಟ *ವಿದ್ಯಾ ಮಂದಿರ* ಶಬ್ದಶಃ ಇದರರ್ಥ *ಜ್ಞಾನದ ದೇಗುಲ* ಎನ್ನುವುದೇ - ಆ ಯೋಜನೆಯಾಗಿತ್ತು.ಈ ಯೋಜನೆಯಡಿಯಲ್ಲಿ ಶುಕ್ಲಾ ಸ್ಥಾಪಿಸಲು ಬಯಸಿದ್ದ ಗ್ರಾಮೀಣ ಶಾಲೆಗಳು, ಅದಕ್ಕಿಂತ ಹೆಚ್ಚಾಗಿ ಅವರ ವ್ಯಕ್ತಿತ್ವದಲ್ಲಿ ಅಡಕವಾಗಿದ್ದ ಉದಾರವಾದಿ ಮತ್ತು ಸೆಕ್ಯುಲರ್ ಅಂಶಗಳ ಗೈರುಹಾಜರಿಯು ಅದನ್ನು ಟೀಕೆಗಳಿಗೆ ಗುರಿಮಾಡಿತು. ಕೇವಲ ಲಾಕ್ಷಣಿಕ ತರ್ಕದ ಪರಿಣಾಮವಾಗಿ ಇದು ಗಾಂಧಿಯವರ ಮೂಲ ಪ್ರಸ್ತಾವನೆಯನ್ನೂ ಆವರಿಸಿತು. ಈ ವಿರೋಧವು ಪ್ರಭುತ್ವದ ನೀತಿಯ ದೃಷ್ಟಿಕೋನದಲ್ಲಿ ಮೂಲಭೂತ ಶಿಕ್ಷಣವನ್ನು ಚರ್ಚಿಸಲು ನೇಮಕವಾದ ಶಿಕ್ಷಣದ ಕೇಂದ್ರ ಸಲಹಾ ಸಮಿತಿಯ ಸದಸ್ಯರನ್ನೂ ಪ್ರೇಕ್ಷಕರನ್ನಾಗಿ ಒಳಗೊಳ್ಳುವಂತೆ ವ್ಯಾಪಿಸಿತು[8].

ಭಾರತದಲ್ಲಿ ಕೈಗಾರಿಕಾ ಅಭಿವೃದ್ಧಿ ಯೋಜನೆಯು ಗಾಂಧಿಯವರ ಯೋಜನೆಯನ್ನು ಅನುಮಾನದಿಂದ ನೋಡುವಂತೆ ಮಾಡಿ ಟೀಕೆಗಳಿಗೆ ಗುರಿ ಮಾಡಿದ ಮತ್ತೊಂದು ದೃಷ್ಟಿಕೋನವಾಗಿತ್ತು. ಮೂಲಭೂತ ಶಿಕ್ಷಣದ ಪ್ರಸ್ತಾವನೆಯ ಸಮಯದಲ್ಲಿಯೇ ಕಾಂಗ್ರೆಸ್ ಪಕ್ಷವು ರಾಷ್ಟ್ರೀಯ ಯೋಜನಾ ಸಮಿತಿಯನ್ನು ಸ್ಥಾಪಿಸಿತು (ಎನ್.ಪಿ.ಸಿ). ಸ್ವಾತಂತ್ರ್ಯಾನಂತರ ಭಾರತದಲ್ಲಿ 'ಆರ್ಥಿಕ ಪುನಶ್ಚೇತನ' ಗುರಿಯಾಗಿಸಿಕೊಂಡು ಭಾರತದ ಕೈಗಾರೀಕರಣದ ಒಂದು ಯೋಜನೆಯನ್ನು ರೂಪಿಸುವುದು ಎನ್.ಪಿ.ಸಿ.ಯ ನಿರ್ದಿಷ್ಟ ಗುರಿಯಾಗಿತ್ತು. ಅದರ ಅಧ್ಯಕ್ಷರಾಗಿದ್ದ ಜವಾಹರಲಾಲ್ ನೆಹರೂರವರು ಕೇವಲ ದೊಡ್ಡ ಮಟ್ಟದ ಕೈಗಾರಿಕೀಕರಣದಿಂದ ಮಾತ್ರ ಭಾರತದ ಬಡತನ ಹಾಗೂ ನಿರೋದ್ಯೋಗದ ಸಮಸ್ಯೆ ಪರಿಹಾರವಾಗುತ್ತದೆ ಎಂದು ನಂಬಿದ್ದರು. ನೆಹರೂರವರ ನಂಬಿಕೆಗಳನ್ನು ಹೊರತುಪಡಿಸಿ ಅಭಿವೃದ್ಧಿಯ ವಿವಿಧ ವಲಯಗಳ ಕುರಿತಾದ ಎನ್.ಪಿ.ಸಿ.ಯ ವರದಿಯು ಬಹಳ ಶಕ್ತಿಶಾಲಿಯಾಗಿ ಬೆಳೆಯುತಿದ್ದ ಕೈಗಾರಿಕೋದ್ಯಮಿಗಳ ವರ್ಗ, ರಾಜಕೀಯದಲ್ಲಿದ್ದ ಅವರ ಬೆಂಬಲಿಗರು ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನವನ್ನೂ ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿದ್ದ ಉನ್ನತ ವಿದ್ಯಾಭ್ಯಾಸವನ್ನು ಪಡೆದಿದ್ದ ಬುದ್ಧಿಜೀವಿಗಳ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತಿತ್ತು.

ಎನ್.ಪಿ.ಸಿ. ವರದಿಯಲ್ಲಿನ ಕೇಂದ್ರ ನಿಯಂತ್ರಿತ ಆರ್ಥಿಕತೆ ಮತ್ತು ಭಾರಿ ಕೈಗಾರಿಕೆಗಳ ತೀವ್ರಗತಿಯ ವಿಸ್ತರಣೆಯ ಪ್ರಸ್ತಾವನೆಯು ಗಾಂಧಿಗೆ ಖುಷಿ ತರುವಂತಹದಾಗಿರಲಿಲ್ಲ. ಎನ್.ಪಿ.ಸಿ. ಸಭೆಗಳು ಮತ್ತು ಅದರ ಕೆಲಸದ ಬಗ್ಗೆ

ಅವರಿಗೆ ಬಹಳ ಅಸಮಧಾನವಿತ್ತು ಮತ್ತು ಅದನ್ನು ಅವರು ಹೊರಹಾಕಿದ್ದರೂ ಕೂಡ. ಗಾಂಧಿಯವರ ಅಭಿಪ್ರಾಯ ಮತ್ತು ಎನ್.ಪಿ.ಸಿ.ಯ ನಡುವಿನ ಸಂಘರ್ಷ ರಾಷ್ಟ್ರೀಯ ಆರ್ಥಿಕತೆಯ ಭಾರಿ ಕೈಗಾರಿಕೆಗಳ ಪ್ರಮಾಣ ಮತ್ತು ಪಾತ್ರಕ್ಕೆ ಮಾತ್ರ ಸೀಮಿತವಾಗಿರಲಿಲ್ಲ; ಅದು ಕೈಗಾರಿಕಾ ಅಭಿವೃದ್ಧಿಯ ತಾತ್ವಿಕ ನೆಲೆಗಟ್ಟಿಗೆ ವಿಸ್ತರಿಸಿತ್ತು. ಭಾರತದ ಭೌತಿಕ ಸಂಪತ್ತನ್ನು ಹೊರತುಪಡಿಸಿ, ಭಾರಿ ಕೈಗಾರಿಕೆಗಳ ಬೆಳವಣಿಗೆಗೆ ಭದ್ರತೆಯನ್ನು ಪ್ರಮುಖ ತಾತ್ವಿಕ ನೆಲೆಗಟ್ಟನ್ನಾಗಿಸಿತ್ತು. ಪಶ್ಚಿಮದಲ್ಲಿರುವಂತೆ ಮಿಲಿಟರೀಕರಣ ಮತ್ತು ಅಭಿವೃದ್ಧಿಯು ಒಟ್ಟಾಗಿ ಹೋಗಬೇಕಿತ್ತು. ಇಂತಹ ಹೊಂದಾಣಿಕೆಯು ಗಾಂಧಿಯವರಿಗೆ ಖುಷಿ ಕೊಡುವ ಸಂಗತಿಯಾಗಿತ್ತು ಎಂದು ನಾವು ಪರಿಗಣಿಸಲಾಗುವುದಿಲ್ಲ.

ಸಾಮಾನ್ಯ ಮತ್ತು ತಾಂತ್ರಿಕ ಶಿಕ್ಷಣದ ಎನ್.ಪಿ.ಸಿ.ಯ ಉಪಸಮಿತಿಯು ಈ ಸಂಘರ್ಷವನ್ನು ಗುರುತಿಸಲಿಲ್ಲ, ಬಹುಶಃ ಶಿಕ್ಷಣದ ಸಂದರ್ಭದಲ್ಲಿ ದೊಡ್ಡ ಪರಿಕಲ್ಪನಾತ್ಮಕ ಚರ್ಚಾಂಶಗಳ ಬಗ್ಗೆ ಮಾತನಾಡಬೇಕಾದ ಅಗತ್ಯವಿಲ್ಲ ಎನ್ನುವ ಕಾರಣಕ್ಕಿರಬಹುದು. ಆದರೆ ಅಸ್ತಿತ್ವದಲ್ಲಿರುವ ವ್ಯವಸ್ಥೆಯ ಜಾಗದಲ್ಲಿ ಗಾಂಧಿಯವರು ಸೂಚಿಸಿದ ವ್ಯವಸ್ಥೆಯನ್ನು ತರಲು ಉಪಸಮಿತಿಯು ಬಹಳ ಹಿಂಜರಿಕೆಯನ್ನು ತೋರಿತು. 1938 ರಿಂದಲೂ ಕಾಂಗ್ರೆಸ್ ಸಚಿವಾಲಯಗಳು ಇದ್ದ ಕಡೆ ಪ್ರಾಥಮಿಕ ಶಿಕ್ಷಣದಲ್ಲಿ ಇದ್ದಕ್ಕಿಂದ್ದಂತೆ ಹೆಚ್ಚು ದಕ್ಷತೆ ಕಾಣಿಸಿಕೊಂಡಿದೆ (ಈ ಪ್ರತಿಪಾದನೆಗೆ ಪೂರಕವಾಗಿ ಕೊಟ್ಟ ದತ್ತಾಂಶವು ಬಾಂಬೆಗೆ ಸೀಮಿತವಾಗಿತ್ತು) ಎಂದು ಅದು ವಾದಿಸಿತು. 'ಹಾಗಾಗಿ ಈ ಪ್ರಗತಿಯನ್ನು ಬದಲಿಸಿ ಅದರ ಜಾಗದಲ್ಲಿ ಮೂಲಭೂತ ಶಿಕ್ಷಣವನ್ನು ತರುವುದು ತಪ್ಪಾಗುತ್ತದೆ. ಮೂಲಭೂತ ಶಿಕ್ಷಣವನ್ನು ಸಾಧ್ಯವಾದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಕಸಿ ಮಾಡಬಹುದು' ಎಂದು ವರದಿಯು ಹೇಳಿತು[9]. ವರದಿಯು ವಾರ್ಧಾ ಯೋಜನೆಯ ಮೂಲಭೂತ ಶಿಕ್ಷಣದಲ್ಲಿ ಗಂಭೀರವಾದ ಸಮಸ್ಯೆಗಳನ್ನು ಕಂಡಿದೆ ಎಂಬುದು ಸ್ಪಷ್ಟವಾಗಿದೆ. ಉತ್ಪಾದಕ ಕೌಶಲಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿರುವುದು ಪ್ರಮುಖ ಸಮಸ್ಯೆಯಾಗಿ ಕಂಡಿದೆ. ಇದರ ವಿರುದ್ಧ ಉಪಸಮಿತಿಯ ವಾದವೆಂದರೆ: 'ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ ವೃತ್ತಿಗೆ ಅಷ್ಟೊಂದು ಒತ್ತನ್ನು ನೀಡುವುದು ಅಂತಃಸತ್ವಕ್ಕೆ ಕೆಡುಕ್ಕನುಂಟು ಮಾಡುತ್ತದೆ ಮತ್ತು ಅಂತಹ ಒಂದು ಸಂಕುಚಿತ ಮಾರ್ಗದಲ್ಲಿ ಸಾಮಾನ್ಯ ವಿಷಯಗಳನ್ನು ಬೋಧಿಸುವುದು ವಿಷಯದ ಜ್ಞಾನವನ್ನು ಅರ್ಥಹೀನಗೊಳಿಸುತ್ತದೆ ಮತ್ತು ಧೋಷಪೂರಿತಗೊಳಿಸುತ್ತದೆ.[10] ಮತ್ತೊಂದು ಪ್ರಮುಖವಾದ ಆಕ್ಷೇಪಣೆಯು ಮೊದಲಿನದಕ್ಕೆ ಸಂಬಂಧಿಸಿದಂತೆಯೆ ಇದೆ. ಮಕ್ಕಳೂ ಉತ್ಪಾದನೆಯಲ್ಲಿ ತೊಡಗಿಕೊಳ್ಳುವ ಮೂಲಕ ಶಾಲೆಯ ಹಣಕಾಸನ್ನು ನಿಭಾಯಿಸಬೇಕು ಎನ್ನುವುದ ಉಪಸಮಿತಿಗೆ ಒಪ್ಪಿಗೆಯಾಗಲಿಲ್ಲ. ಅಂತಹ ಒಂದು ವ್ಯವಸ್ಥೆಯು ಸ್ವಲ್ಪ ಮಟ್ಟಿಗೆ ಶಾಲೆಗಳಲ್ಲಿ ಬಾಲಕಾರ್ಮಿಕತೆಯು ಇದೆ ಎನ್ನುವುದನ್ನು ತೋರಿಸುತ್ತದೆ ಎಂದು ವರದಿಯು ಹೇಳುತ್ತದೆ[11].

ಇವು ಬಹಳ ಚಿರಪರಿಚಿತ ವಾದಗಳಾಗಿದ್ದವು ಮತ್ತು ಅವು ಎನ್.ಪಿ.ಸಿ.ಯು ಅಳವಡಿಸಿಕೊಂಡ ಸಾಮಾನ್ಯ ದೃಷ್ಟಿಕೋನಕ್ಕೆ ಪೂರಕವಾಗಿದ್ದವು. ಪ್ರಾಥಮಿಕ ಶಿಕ್ಷಣಕ್ಕೆ ಒಂದು ವಿಶಾಲವಾದ ಮತ್ತು ಉದಾರವಾದಿ ಪಠ್ಯಕ್ರಮವನ್ನು ಮತ್ತು ತಾಂತ್ರಿಕ ಶಿಕ್ಷಣಕ್ಕೆ ಸವಲತ್ತುಗಳನ್ನು ವಿಸ್ತರಿಸುವುದು ಶಿಫಾರಸ್ಸುಗೊಂಡ ಯೋಜನೆಯ ಪ್ರಮುಖ ಒತ್ತಾಯಗಳಾಗಿದ್ದವು. ಕಡ್ಡಾಯ ಪ್ರಾಥಮಿಕ ಶಿಕ್ಷಣದ ಹಣಕಾಸಿನ ಜವಾಬ್ದಾರಿಯನ್ನು ಪ್ರಭುತ್ವಕ್ಕೆ ವಹಿಸಲಾಯಿತು. ಖಂಡಿತವಾಗಿಯೂ ಇದು ಆಧುನಿಕತೆ ಚಿಂತನೆಯ ಸಾಮಾನ್ಯವಾದ ಅಂಶವಾಗಿತ್ತು. ಇದಕ್ಕೆ ಹೋಲಿಸಿದಾಗ ಗಾಂಧಿಯವರ ಚಿಂತನೆಗಳು ಸತ್ವಹೀನ ಮತ್ತು ಸಾಂಪ್ರದಾಯಿಕವೆನಿಸಿದವು. ಸಾಕಷ್ಟು ಸ್ವಾಯತ್ತತೆಯನ್ನು ಹೊಂದಿರುವ ಆದರೆ ಪ್ರಾಥಮಿಕ ಉತ್ಪಾದನಾ ಪ್ರಕ್ರಿಯೆಯಗಳನ್ನವಲಂಬಿಸಿದ ಸಾಮಾನ್ಯವಾದ ಜೀವನಮಟ್ಟವನ್ನು ಖಾತ್ರಿಪಡಿಸುವ ಗಾಂಧಿಯವರ ಗ್ರಾಮ ಗಣರಾಜ್ಯಗಳ ಯುಟೋಪಿಯಾಕ್ಕೆ ವ್ಯತಿರಿಕ್ತವಾಗಿ ಆಧುನಿಕತೆಯ

ಯುಟೋಪಿಯಾವು ಕೈಗಾರೀಕರಣ ಮೂಲಸೌಕರ್ಯಗಳನ್ನು ನಿರ್ಮಿಸುವ ಪ್ರಭುತ್ವವಿರುವ ಎಲ್ಲರಿಗೂ ಉತ್ತಮವಾದ ಜೀವನಮಟ್ಟದ ಭರವಸೆಯನ್ನು ಕೊಡುವ ಒಂದು ಬಲವಾದ ಕೇಂದ್ರೀಕೃತ ವ್ಯವಸ್ಥೆಯನ್ನು ಪ್ರತಿಪಾದಿಸುತ್ತದೆ. ಪ್ರಾಥಮಿಕ ಶಾಲಾ ಕಲಿಕೆಗೆ ಪ್ರಭುತ್ವ-ಬೆಂಬಲಿತ ಸೌಕರ್ಯಗಳಡಿಯಲ್ಲಿ ಒಂದು ಉದಾರವಾದಿ ಪಠ್ಯಕ್ರಮವನ್ನು ಕೊಡುವುದು ಆಧುನಿಕತೆಯ ದೃಷ್ಟಿಕೋನವಾಗಿತ್ತು. ನೆಹರೂ ತಮ್ಮ 'ಡಿಸ್ಕವರಿ ಆಫ್ ಇಂಡಿಯಾ' ದಲ್ಲಿ ಶಿಕ್ಷಣವನ್ನು ಕುರಿತ ಒಂದು ಪರ್ಯಾಲೋಚನೆಯಲ್ಲಿ ಅಂತಹ ಒಂದು ವ್ಯವಸ್ಥೆಯ ಬೋಧನಾಶಾಸ್ತ್ರದ ಗಟ್ಟಿತನವನ್ನು ಕುರಿತು ಹೀಗೆ ಹೇಳುತ್ತಾರೆ:

ಮಗುವಿನ ಶಿಕ್ಷಣವು ಕೆಲವು ಕೌಶಲ ಅಥವಾ ದೈಹಿಕ ಚಟುವಟಿಕೆಯೊಂದಿಗೆ ನಿಕಟವಾಗಿ ಹೊಂದಿಕೊಂಡಿರಬೇಕು ಎಂಬುದನ್ನು ಈಗ ಚೆನ್ನಾಗಿ ಗುರುತಿಸಲಾಗಿದೆ. ಆ ಮೂಲಕ ಮನಸ್ಸು ಪ್ರಚೋದನೆಗೊಳ್ಳುತ್ತದೆ ಮತ್ತು ಮನಸ್ಸು ಮತ್ತು ಕೈಗಳ ಚಟುವಟಿಕೆಗಳ ನಡುವೆ ಸಂಯೋಜನೆ ಇರುತ್ತದೆ. ಹಾಗೆಯೆ ಬೆಳೆಯುತ್ತಿರುವ ಹುಡುಗ ಅಥವಾ ಹುಡುಗಿಯ ಮನಸ್ಸು ಯಂತ್ರದಿಂದ ಪ್ರಚೋದನೆಗೊಳ್ಳುತ್ತದೆ. ಯಂತ್ರಗಳ ಪರಿಣಾಮಗಳಡಿಯಲ್ಲಿ ಅದು ಬೆಳೆಯುತ್ತದೆ (ಸೂಕ್ತ ಪರಿಸರದಲ್ಲಿ, ಖಂಡಿತವಾಗಿಯೂ ಕಾರ್ಖಾನೆಯಲ್ಲಿರುವ ಶೋಷಿತ ಮತ್ತು ಅಸಂತೃಪ್ತಿಯ ಕಾರ್ಮಿಕನಲ್ಲ) ಮತ್ತು ಹೊಸ ದಿಗಂತಗಳನ್ನು ಅದು ತೆರೆದಿಡುತ್ತದೆ. ಸರಳವಾದ ವೈಜ್ಞಾನಿಕ ಪ್ರಯೋಗಗಳು, ಸೂಕ್ಷ್ಮದರ್ಶನದಲ್ಲಿ ಆಗಾಗ ಇಣುಕಿ ನೋಡುವುದು ಮತ್ತು ಪ್ರಕೃತಿಯ ಸಾಮಾನ್ಯ ವಿದ್ಯಮಾನಗಳ ವಿವರಣೆ ಮತ್ತು ಈಗಾಗಲೆ ನಿಶ್ಚಿತವಾದ ಪರಿಭಾಷೆಗಳು ಮತ್ತು ಹಳೆಯ ಸೂತ್ರಗಳನ್ನು ಅವಲಂಬಿಸುವುದರ ಬದಲು ಬದುಕಿನ ಕೆಲವು ಪ್ರಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳುವುದು, ಇವೆಲ್ಲವೂ ಒಂದು ಬಗೆಯ ಉತ್ಸಾಹವನ್ನು ಹುಟ್ಟಿಸುತ್ತವೆ. ಆತ್ಮಸ್ಥೈರ್ಯ ಮತ್ತು ಸಹಕಾರಿ ಮನೋಭಾವ ಬೆಳೆಯುತ್ತದೆ ಮತ್ತು ಗತದ ಹಳಸಿದ ನೆನಪುಗಳು ಹುಟ್ಟುಹಾಕುವ ಹತಾಶೆಯನ್ನು ಕಡಿಮೆ ಮಾಡುತ್ತವೆ. ನಿರಂತರವಾಗಿ ಬದಲಾಗುವ ಪ್ರಗತಿಶೀಲ ಯಾಂತ್ರಿಕ ತಂತ್ರಗಳು ಇದಕ್ಕೆ ಹಾದಿ ಮಾಡಿಕೊಡುತ್ತವೆ. ಅಂತಹ ನಾಗರೀಕತೆ ಒಂದು ಗುರುತರವಾದ ಬದಲಾವಣೆಯಾಗಿದೆ, ಹಳೆಯದರಿಂದ ಹೆಚ್ಚುಕಡಿಮೆ ಹೊರಜಿಗಿಯುವಿಕೆ, ಆಧುನಿಕ ಕೈಗಾರೀಕರಣದೊಂದಿಗೆ ನಿಕಟವಾಗಿ ಬೆಸೆದುಕೊಂಡಿದೆ[12].

ಈ ಪದಗಳನ್ನು ಬರೆಯುತ್ತಿರುವಾಗ ನೆಹರೂ ಅವರು ಗಾಂಧಿಯ ಮೂಲಭೂತ ಶಿಕ್ಷಣದ ಕಲ್ಪನೆಯೊಂದಿಗೆ ಸಂಭಾಷಿಸುತ್ತಿದ್ದಾರೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಮೂಲಭೂತ ಶಿಕ್ಷಣದ ಆಧಾರವಾಗಿರುವ ಮುಖ್ಯ ಬೋಧನಾಶಾಸ್ತ್ರದ ಊಹೆಯಾದ ಕೌಶಲ ಅಥವಾ ದೈಹಿಕ ಶ್ರಮ ಮಗುವಿನ ಮನಸ್ಸನ್ನು ಪ್ರಚೋದಿಸುತ್ತದೆ ಎನ್ನುವುದನ್ನು ಒಪ್ಪಿಕೊಂಡೇ ನೆಹರೂ ಪ್ರಾರಂಭಿಸುತ್ತಾರೆ. ನಂತರ ಯಂತ್ರ ಹಾಗೂ ಕೌಶಲಗಳ ನಡುವಿನ ಸಾದೃಶ್ಯದ ಬಲದಿಂದ ಅವರು ಮೂಲಭೂತ ಶಿಕ್ಷಣಕ್ಕೆ ಆಧಾರವಾಗಿದ್ದ ಪ್ರಮುಖವಾದ ಆರ್ಥಿಕ ಊಹೆಯನ್ನು ನೇರವಾಗಿ ಪ್ರಸ್ತಾಪಿಸದೆ ಅದಕ್ಕೆ ಸವಾಲನ್ನೊಡ್ಡುವ ಮತ್ತೊಂದು ವಾದದ ಹಾದಿಯನ್ನು ಹಿಡಿಯುತ್ತಾರೆ. ಗಾಂಧಿಯವರ ಪ್ರಸ್ತಾವನೆಯೊಂದಿಗೆ ಪ್ರಾರಂಭವಾಗುವ ಸಂಭಾಷಣೆಯು ಎರಡು ವಾಕ್ಯಗಳ ನಂತರ ವೈಜ್ಞಾನಿಕ ಪ್ರಯೋಗಗಳ ಬೋಧನಾಶಾಸ್ತ್ರದ ಮೌಲ್ಯಗಳು ಮತ್ತು ಅಂತಹ ಪ್ರಯೋಗಗಳು ಕೈಗಾರಿಕಾ ನಾಗರೀಕತೆಯೊಂದಿಗೆ ಎಂತಹ ಸಂಬಂಧವನ್ನು ಹೊಂದಿವೆ ಎನ್ನುವುದರ ಕಡೆಗೆ ಬದಲಾಗುತ್ತವೆ. ಈ ಸಂಬಂಧವನ್ನು ಮತ್ತು ಪ್ರಯೋಗಾಧಾರಿತ ವೈಜ್ಞಾನಿಕ ಬೋಧನಾಶಾಸ್ತ್ರವು ಭಾರತದಲ್ಲಿ ಶಿಕ್ಷಣವನ್ನು ಪುನಶ್ಚೇತನಗೊಳಿಸುವಲ್ಲಿ ಎಂತಹ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂಬುದನ್ನು ನೆಹರು ಸರಿಯಾಗಿಯೆ ಗುರುತಿಸುತ್ತಾರೆ. ಅಂತಹ ಪುನಃಶ್ಚೇತನದ ಭರವಸೆಯನ್ನು ಅವರು ಗಾಂಧಿಯವರ ಶೈಕ್ಷಣಿಕ ಯೋಜನೆಯನ್ನು ಒಪ್ಪದ ಮತ್ತು ತೀವ್ರಗತಿಯ ಆಧುನೀಕರಣಕ್ಕೆ ಬದ್ಧರಾಗಿದ್ದ ಹಲವು ಭಾರತೀಯ ಬುದ್ಧಿಜೀವಿಗಳೊಂದಿಗೆ, ಯಾರು ಗಾಂಧಿಯ ಶೈಕ್ಷಣಿಕ ಯೋಜನೆಯನ್ನು ಒಪ್ಪಲಾಗದು ಎನ್ನುತ್ತಿದ್ದರೋ ಅವರೊಡನೆ ಹಂಚಿಕೊಳ್ಳುತ್ತಾರೆ. ಪ್ರಸಿದ್ಧ ಕಾದಂಬರಿಕಾರರಾಗಿದ್ದ ಮುಲ್ಕ್‌ರಾಜ್ ಆನಂದ್ ಅವರಲ್ಲೊಬ್ಬರಾಗಿದ್ದರು. ಸ್ವಾತಂತ್ರ್ಯ ಕಾಲದಲ್ಲಿ ಪ್ರಕಟವಾದ ಅವರ *ಆನ್ ಎಜುಕೇಶನ್* ಎನ್ನುವ ಕೃತಿಯಲ್ಲಿ ಅವರು ಹೀಗೆ ಹೇಳಿದ್ದಾರೆ:

ವಿದೇಶಿ ಹಾಗೂ ಸ್ಥಳೀಯ ಬಂಡವಾಳಶಾಹಿಗಳಿಂದ ಉತ್ಪಾದಿಸಲ್ಪಟ್ಟ ಅತ್ಯಂತ ಕಡಿಮೆ ಬೆಲೆಯ ಯಂತ್ರದಿಂದ ತಯಾರಾದ ವಸ್ತುಗಳು ಭಾರತದ ಪ್ರತಿಯೊಂದು ಹಳ್ಳಿಗೂ ದಾಳಿ ಇಡುತ್ತಿರುವ ಸಮಯದಲ್ಲಿ ಸಮುದಾಯದೊಳಗಿನ ಸಂತೃಪ್ತಿಯ ಮಿತಿಯೊಳಗೆ ನಿಷ್ಕ್ರಿಯತೆಯಿಂದಿರುವ ಈ ಮಂದಬುದ್ಧಿಗಳನ್ನು ಖಾದಿ ಹಾಗೂ ಅಹಿಂಸೆಯ ಆಧಾರದಲ್ಲಿ ಅಂತಹ ಪುಟ್ಟ ಮನಸ್ಸುಗಳನ್ನು ಪರಿಪಕ್ವಗೊಳಿಸುವುದು ಅಸಾಧ್ಯ ಮಾತ್ರವಲ್ಲ, ಮಹಾತ್ಮರು ಸಾಮಾನ್ಯ ಭಾರತೀಯನಲ್ಲಿ ಯಾವ ಗುಣಗಳನ್ನು ಹುಟ್ಟುಹಾಕಲು ಬಯಸುತ್ತಿದ್ದಾರೊ ಅದಕ್ಕೆ ತದ್ವಿರುದ್ಧವಾದದ್ದು ಸಂಭವಿಸುವ ಸಾಧ್ಯತೆ ಇದೆ[13].

ಸ್ಪಷ್ಟವಾಗಿ, ಆಧುನಿಕತಾವಾದಿಗಳ ದೃಷ್ಟಿಯಲ್ಲಿ ಗಾಂಧಿಯವರ ಯೋಜನೆಯು ಭಾರತವನ್ನು ಹಿಂದುಳಿಯುವಂತೆ ಮಾಡಲು ಒಂದು ಆಹ್ವಾನ ಮಾತ್ರ ಎನ್ನುವುದಾಗಿತ್ತು. ಅಷ್ಟೆ ಅಲ್ಲ, ಸದ್ಯದಲ್ಲೇ ಲಭ್ಯವಿರುವ ಸಂಪನ್ಮೂಲಗಳಿಂದಲೇ ಮಕ್ಕಳ ಶಿಕ್ಷಣದ ಆಧುನೀಕರಣವನ್ನು (ಪ್ರಾಥಮಿಕ ಶಾಲೆಗಳ್ಲಲಿ ಸೂಕ್ಷ್ಮದರ್ಶಕ ಯಂತ್ರಗಳನ್ನು ಒದಗಿಸುವಷ್ಟರ ಮಟ್ಟಿಗೆ) ಸಾಧಿಸುವುದು ಸಾಧ್ಯ ಎಂದು ಅವರು ನಂಬಿದ್ದರು.

**ಜಾರಿಗೊಳಿಸುವಿಕೆ**

ಗಾಂಧಿಯವರ ಶಿಕ್ಷಣದ ಯೋಜನೆಗೆ ಬಂದ ಎಲ್ಲ ಪ್ರತಿಕ್ರಿಯೆಗಳೂ ಪ್ರತಿಕೂಲವಾಗಿರಲಿಲ್ಲ. ಸಾಕಷ್ಟು ಪ್ರಖ್ಯಾತ ಶಿಕ್ಷಣ ತಜ್ಞರುಗಳು ಅವರ ಮೂಲಭೂತ ಶಿಕ್ಷಣವನ್ನು ಸ್ವಾಗತಿಸಿದರು ಮತ್ತು ಅದನ್ನು ಆಚರಣೆಗೆ ತರಲು ವಿಸ್ತೃತ ಯೋಜನೆಗಳನ್ನು ಸಿದ್ಧಪಡಿಸಿದರು. ನಿರೀಕ್ಷಿಸಿದಂತೆಯೆ ಗಾಂಧಿಯವರ ಚಿಂತನೆಯನ್ನು ವ್ಯಾಖ್ಯಾನಿಸಿದ ರೀತಿಯಲ್ಲಿ ವ್ಯಾಪಕವಾದ ವ್ಯತ್ಯಾಸಗಳಿದ್ದವು. ಒಂದು ತುದಿಯಲ್ಲಿ ಕೆಲವು ಶಿಕ್ಷಣ ತಜ್ಞರುಗಳು ಮತ್ತು ನಾಯಕರುಗಳು ಈ ಯೋಜನೆಯನ್ನು ಪಾಸ್ಟಲೊಜ್ಜಿ ಮತ್ತು ಡೀವೆಯಂತಹ ಚಿಂತಕರುಗಳ ಪ್ರಗತಿಪರ ಶೈಕ್ಷಣಿಕ ಚಿಂತನೆಯೊಂದಿಗೆ ಸಮೀಕರಿಸಿದರು. ಮತ್ತೊಂದು ತುದಿಯಿಂದ ಗಾಂಧಿಯವರ ಚಿಂತನೆಯನ್ನು ಅಕ್ಷರಶಃ ವ್ಯಾಖ್ಯಾನಿಸುವ ಮೂಲಕ ಮೂಲಭೂತ ಶಿಕ್ಷಣವನ್ನು ಒಂದು ನಿಶ್ಚಿತ ಸನ್ನದುವಿನ ರೂಪದಲ್ಲಿ, ಒಂದು ಸಂಪ್ರದಾಯದಂತೆ ಕಂಡರು. ಒಂದು ಸಂಗತಿಯಂತೂ ನಿಜ, ಗಾಂಧಿಯವರ ಯೋಜನೆಗೆ ಬಂದ ವ್ಯಾಖ್ಯಾನಗಳ ವ್ಯಾಪ್ತಿ ಏನೇ ಇರಲಿ ಮತ್ತು ಅದಕ್ಕೆ ಎದುರಾದ ಆಡಳಿತಾತ್ಮಕ ಮತ್ತು ಹಣಕಾಸಿನ ತೊಂದರೆಗಳೇನೇ ಇರಲಿ, ಸ್ವಾತಂತ್ರ್ಯಾನಂತರದ ಭಾರತದ ಹಲವೆಡೆಗಳಲ್ಲಿ ಮೂಲಭೂತ ಶಿಕ್ಷಣದ ಯೋಜನೆಗಳನ್ನು ಗಣನೀಯ ಮಟ್ಟದಲ್ಲಿ ಜಾರಿಗೊಳಿಸಲಾಯಿತು. ಇದರ ಅಳವಡಿಕೆ ದೊಡ್ಡ ಮಟ್ಟದಲ್ಲಿ ವಿಫಲವಾಯಿತು ಎಂದು ಹೇಳುವುದು ವಾಡಿಕೆಯಾಗಿಬಿಟ್ಟಿದೆ. ಅದರ ಚಾರಿತ್ರಿಕ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಈ ತೀರ್ಮಾನವು ಅಸಮರ್ಪಕವಾದದ್ದು ಎಂದು ಕಂಡುಬರುತ್ತದೆ. ಆದರೆ ಅದು ಬೇರೆಯದೇ ಕತೆ. ಗಾಂಧಿಯವರ ಯೋಜನೆಯ ಅಳವಡಿಕೆಯು ಭಾರತದ ಕೃಷಿಯಲ್ಲಿ ಪಶ್ಚಿಮದ ಮುಂದುವರೆದ ಆರ್ಥಿಕತೆಗಳು ಮತ್ತು ಅಧಿಕಾರದ ಕೇಂದ್ರೀಕರಣದ ಮಧ್ಯಪ್ರವೇಶದ ಹೊಸ ಘಟ್ಟದ ಪರಿಣಾಮವಾದ ಭಾರತದ ಆರ್ಥಿಕತೆಯು 1960 ರ ದಶಕದ ‘ಅಭಿವೃದ್ಧಿಯ ದಶಕ’ದಲ್ಲಿ ಬದುಕುಳಿಯಲಿಲ್ಲ ಎಂಬುದು ಇಲ್ಲಿ ದಾಖಲಿಸಲೇಬೇಕಾದ ಒಂದು ಸಂಗತಿಯಾಗಿದೆ.

***

## ಟಿಪ್ಪಣಿಗಳು


1. M.K. Gandhi, The problem of education, p. 164, Ahmedabad, Navajivan, 1962.
2. For a collection of Gandhi's speeches and articles on basic education, see Educational reconstruction, Wardha, Hindustan Talimi Sangh, 1938. See also Gandhi's speech at the Wardha Conference on 22 October 1937 in T.S. Avinashilingam, Gandhiji's Experiments in Education, Delhi, Ministry of Education, 1960.
3. Louis Fischer, The life of Mahatma Gandhi, London, Granada, 1982 (first published 1951).
4. Leo Tolstoy, Tolstoy on education, p. 111, Chicago, University of Chicago Press, 1968.
5. In Harijan, 9 September 1939.
6. See Gandhi's speech at Nagpur in 1938 to a group of visiting economists, in The collected works of Mahatma Gandhi; vol. 68, p. 258, Ahmedabad, Navajivan, 1977.
7. M.K. Gandhi, Documents on social, moral and spiritual values in education, p. 20, New Delhi, NCERT, 1979.
8. Bureau of Education, Post-war educational development in India, 3rd ed., Delhi, Manager of Publications, 1944. (report of Central Advisory Board of Education.)
9. National Planning Committee, General education and technical education and developmental research, p. 58, Bombay, Vora, 1948. (Reports of Sub-Committees series.)
10. Ibid., p. 140.
11. Ibid., p. 142.
12. Jawaharlal Nehru, The discovery of India, p. 416. London, Meridian Books, 1960 (first published in 1946).
13. Mulk Raj Anand, On education, p. 20, Bombay, Hind Kitab, 1947


## ಶಿಕ್ಷಣ ಕುರಿತು ಮೋಹನದಾಸ್ ಗಾಂಧಿ ಬರೆದಿರುವ ಇತರ ಲೇಖನ, ಕೃತಿಗಳು

These bibliographies have been compiled by Dr. A. Mathew, Fellow, National Institute of Adult Education, New Delhi, India.


Adult Education. In: R.K. Prabhu (ed.), India of my dreams, p. 193-4. Ahmedabad, Navajivan Publishing House, 1947. (Excerpts from Harijan, 22 June1940.)

Basic education. Ahmedabad, Navajivan Publishing House, 1951.

Basic national education. Wardha, Hindustani Talimi Sangh, 1939.

Education for life. Rajamundry, Hindustan Publishing Co., 1937.

Educational reconstruction. Wardha, Hindustani Talimi Sangh, 1939.

Educational reconstruction: being a collection of Gandhiji's articles on the Wardha scheme[...] Bombay, Vora & Co. Publishers Ltd., 1939.

The evils wrought by the english medium. (Edited by R.K. Prabhu.) Ahmedabad, Navajivan Publishing House, 1958.

Higher Education. In: R.K. Prabhu (ed.), India of My Dreams, p. 190-3. Ahmedabad, Navajivan Publishing House, 1947. (Excerpts from Harijan, 31 July 1937; 2 October 1937; 2 November 1947.) Medium of instruction. (Edited by Bharatan Kumarappa.) Ahmedabad, Navajivan Publishing House, 1954.

Message to students. (Edited by A.T. Hingorani.) Allahabad, Leader Press, 1958.

My views on education. (Edited by A.T. Hingorani.) Bombay, Bharatiya Vidya Bhavan, 1970.

The new education. Wardha, Hindustani Talimi Sangh, 1939.

The New Education. In: R.K. Prabhu (ed.), India of my dreams, p. 184-7. Ahmedabad, Navajivan Publishing House, 1947. (Excerpts from Young India, 1 May 1921; Harijan, 8 March 1935; 28 August 1937; 8 May 1937; 31 July 1937; 11 September 1937; 9 October 1937.)

The problem of education. Ahmedabad, Navajivan Publishing House, 1962.

Rebuilding our villages. Ahmedabad, Navajivan Publishing House, 1952.

Self-supporting Education. In: R.K. Prabhu (ed.), The task before Indian students, p. 30-32. Ahmedabad, Navajivan Publishing House, 1961. (Excerpts from Young India, 2 August 1928.)

The task before the students. (Edited by R.K. Prabhu.) Ahmedabad, Navajivan Publishing House, 1961.

To the students. Ahmedabad, Navajivan Publishing House, 1949.

Towards new education. Ahmedabad, Navajivan Publishing House, 1962.

True education. Ahmedabad, Navajivan Publishing House, 1962.

Women's Education. In: R.K. Prabhu (ed.), India of My Dreams. Ahmedabad, Navajivan Publishing House, 1947. (Translated from Gujarati by V.D. Desai. First published in Harijan, 15 July 1950; 15 August 1950.)

## ಮೋಹನದಾಸ್ ಗಾಂಧಿಯ ಶಿಕ್ಷಣ ಕುರಿತ ಚಿಂತನೆಗಳ ಮೇಲೆ ಬಂದ ಕೃತಿಗಳು

Aryanayakam, E.W. The story of twelve years. Sevagram, Wardha, Hindustani Talimi Sangh, 1950. Avinashilingam, T.S. Understanding basic education. Delhi, Manager of Publications, 1954.

——. Gandhiji's thoughts on education. New Delhi, Ministry of Education, 1958.

——. Birth and growth of basic education (1937-1961). The Indian second yearbook of education. New Delhi, National Council of Educational Research and Training, 1964.

Bombay Gandhi Smarak Nidhi. Seminar on educational reconstruction. Bombay, 1963. Cenkner, W. The Hindu personality in education: Gandhi, Aurobindo. New Delhi, Manohar, 1976.

Darampal. The beautiful tree. Delhi, Implex Biblia, 1983.

Hindustani Talimi Sangh. A picture and programme of post-basic education. Sevagram, Wardha, n.d. ——. One step forward: the report of the first conference of basic national education, Poona, October 1939. Sevagram, Wardha, 1939.

——. Seven years of work: eighth annual report of Nai Talim (1938-46). Sevagram, Wardha, n.d.

——. Educational reconstruction. Sevagram, Wardha, 1950.

——. Basic national education: report of the Zakir Hussain Committee and the detailed syllabus. Sevagram, Wardha, 1938.

Hussain. Education in the world of tomorrow. Bombay, The Progressive Group, 1945.

Kripalani, J.B. The latest fad: basic education. Sevagram, Wardha, Hindustani Talimi Sangh, 1948. Mani, R.S. Educational ideas and ideals of Gandhi and Tagore. New Delhi, New Book Society of India, 1961.

Mashruvala, K.G. Towards new educational pattern. Ahmedabad, Navajivan Publishing House, 1971. Mathur, V.D. (ed.). Gandhi as an educationist: a symposium. Delhi, Metropolitan Book Co., 1951. Ministry of Education. Basic and social education. New Delhi, 1948.

——. Report of the assessment committee on basic education. New Delhi. 1956.

Miri, I. Mahatma Gandhi's educational theory. New Delhi, Gandhian Thought, n.d.

Narayan, S. Towards better education. Bombay, Asia Publishing House. 1969.

——. Education of the future. New Delhi, S. Chand & Co., 1973.

Narulkar, S. A picture and programme of adult education. Wardha, Hindustani Talimi Sangh, 1956. Navajivan Publishing House. Rebuilding our villages. Ahmedabad. 1952.

Nayar, D. P. Building for peace or Gandhiji's ideas on social (adult) education. Delhi, Atma Ram & Sons, 1952.

Nivedita, S. Hints on national education. Madras, Ramakrishna Math, 1967.

Patel, M.S. The educational philosophy of Mahatma Gandhi. Ahmedabad, Navajivan Publishing House, 1953.

Pillai, N.P. The educational aims of Mahatma Gandhi. Trivandrum, Kalyan Mandir Publications. 1959. Ramanathan, G. Education from Dewey to Gandhi: the theory of basic education. Bombay, Asia Publishing House, 1962.

Ramji, M.T. The concept of personality in the educational thought of Mahatma Gandhi. New Delhi, NCERT, 1969.

Rao, S.C.S. Gandhian experiment in primary education. New Delhi, NCERT, 1975.

Salamatullah. Thoughts on basic education. Bombay, Asia Publishing House, 1963.

——. Basic education: retrospect and prospect. The second Indian year book of education. New Delhi, NCERT, 1964.

——. Basic education: a case study. In: P.R. Panchamukhi (ed.), Studies in educational reforms in India. Bombay, Himalaya Publishing House, 1989.

Shrimali, K.L. The Wardha scheme: the Gandhian plan of education for rural India. Udaipur, Vidhya Bhavan Society, 1949.

Sykes, M. Basic education: its principles and practice. Madras, Government of Madras, 1950.

Taneja, V.R. Mahatma Gandhi and basic education. Jullundar, University Publishers, n.d.

Upadhyaya, T.M. Mahatma Gandhi: a teacher's discovery. Vallabh Vidyanagar, Gujarat, n.d.

Varkey, C.J. The Wardha scheme of education: an exposition and examination. London, Oxford University Press, 1940.

Verma, I.B. Basic education: a reinterpretation. Agra, Sri Ram Mehra & Co, 1969.

Vyas, K.C. The development of national education in India. Bombay, Vora & Co., Publishers, 1954